ಸಂಪುಟ : 8 ಸಂಚಿಕೆ : 262 ಪುಟ : 4 ಬೆಲೆ : 3.00 ರವಿವಾರ ನವ್ಹಂಬರ್ 26, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 262 Pages : 4 Price : 3.00 Sunday November 26, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಶ್ರೀಗಳಿಂದ ಪ್ರವಚನ

## ಜೀವನ ಎಂಬುದು ಅನುಭವಗಳ ಪ್ರವಾಹ

■ವಿಜಯಸಾಕ್ಷಿ ಸುದ್ದಿ, ಗದಗ

ಕಣ್ಣಿಗೆ ರೂಪದ ಅನುಭವ, ಕಿವಿಗೆ ಶಬ್ದದ ಅನುಭವ, ಚರ್ಮಕ್ಕೆ ಸ್ಪರ್ಶದ ಅನುಭವ ಹೀಗೆ ಜೀವನ ಎನ್ನುವುದು ಅನುಭವಗಳ ಪ್ರವಾಹ. ಈ ಪ್ರವಾಹದಲ್ಲಿ ಕಿವಿಗೆ ಬಿದ್ದ ಶಬ್ದಗಳು ಕೆಲವೊಮ್ಮೆ ಹಿತವಾಗಿರುತ್ತವೆ. ನಿಂದನೆಗಳು ಇರುತ್ತವೆ. ನಿಂದಿಸಿದವರಿಂದ ದೂರ ಇರಬಹುದೇ ಹೊರತು ನಿಂದಿಸಿದ ಶಬ್ದಗಳಿಂದ ಮುಕ್ತವಾಗಲು ಸಾಧ್ಯವಿಲ್ಲ ಎಂದು ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಶ್ರೀಗಳು ನುಡಿದರು.

ಅವರು ಇಲ್ಲಿನ ವಿದ್ಯಾದಾನ ಸಮಿತಿ ಮೈದಾನದಲ್ಲಿ ನಡೆಯುತ್ತಿರುವ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಪ್ರವಚನ ನೀಡುತ್ತಿದ್ದರು.

ನಿಂದನೆ, ದುಃಖದಿಂದ ಹೊರಬರಲು ಎರಡು ವಿಭಿನ್ನ ದಾರಿಗಳಿವೆ. ಸಾಮಾನ್ಯ ಜನ ದುಃಖ ಮರೆಯಲು ಪ್ರಯತ್ನ ಪಡುತ್ತಾರೆ. ಅದರಿಂದ ದೂರ ಇರುವ ಪ್ರಯತ್ನ ಮಾಡುತ್ತಾರೆ. ದುಶ್ಚಟಗಳ ದಸರಾಗುತ್ತಾರೆ. ಆದರೂ ನಿಂದಿಸಿದ ಶಬ್ದಗಳನ್ನು ಸ್ಮೃತಿಪಟಲದಿಂದ ಅಳಿಸಿ ಹಾಕಲು ಸಾಧ್ಯವಿಲ್ಲ. ಆದರೆ ಶರಣರು ತಮ್ಮ ಜ್ಞಾನದ ಮೂಲಕ ಆ ನಿಂದನೆಗಳನ್ನು ಬೇರು ಸಹಿತ ಕಿತ್ತುಹಾಕುತ್ತಾರೆ.

ನಿಂದನೆ, ದುಃಖದಿಂದ ಮುಕ್ತವಾಗಲು ಬೇಕಾಗಿರುವುದೇ



ಜ್ಞಾನ. ಜ್ಞಾನ ಎಂದರೆ ಅಂತರಂಗದ ಬೆಳಕು. ಹೇಗಿದೆಯೋ ಹಾಗೆ ತೋರಿಸುವುದೇ ಜ್ಞಾನ. ಅಂಥ ಜ್ಞಾನ ನಮ್ಮೊಳಗೆ ಇದ್ದಾಗ ಮಾತ್ರ ನೆಮ್ಮದಿ ಕಾಣಲು ಸಾಧ್ಯ. ಇಂಥ ನೆಮ್ಮದಿಯನ್ನು ಪ್ರವಚನಗಳ ಶ್ರವಣದಿಂದ, ಒಳ್ಳೆಯ ಗ್ರಂಥಗಳನ್ನು ಓದುವುದರಿಂದ, ಶಾಸ್ತ್ರಗಳಿಂದ, ಸಜ್ಜನರ ಸಂಗದಿಂದ ಮತ್ತು ನಮ್ಮಲ್ಲಿರುವ ವಿವೇಕದಿಂದ ಮಾತ್ರ ಕಂಡುಕೊಳ್ಳಲು ಸಾಧ್ಯ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಹಳಸಿದ ಅನ್ನ ತಿನ್ನುವುದರಿಂದ ಹೊಟ್ಟೆ ಕೆಡುವ ಹಾಗೆ, ಹಳಸಿದ ಶಬ್ದಗಳನ್ನು ನೆನಪಿಟ್ಟುಕೊಂಡರೆ ತಲೆ ಹಾಳಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಂಡು, ಬೇಡವಾದದ್ದನ್ನು ಮನಸ್ಸಿನಿಂದ ಕಿತ್ತೊಗೆದು, ಒಳ್ಳೆಯ ವಿಚಾರಗಳನ್ನು ಮನನ ಮಾಡಿಕೊಂಡು ಜ್ಞಾನದ ಜ್ಯೋತಿ ಬೆಳಗಬೇಕಿದೆ ಎಂದರು.

## ಮೇದಾರ ಕೇತಯ್ಯನವರ ಜಯಂತಿ ನಾಳೆ

■ವಿಜಯಸಾಕ್ಷಿ ಸುದ್ದಿ, ಗದಗ

ನ. 27ರಂದು ಶಿವಶರಣ ಶ್ರೀ ಮೇದಾರ ಕೇತಯ್ಯನವರ 893ನೇ ಜಯಂತಿಯನ್ನು ಗದಗ ನಗರದ ಗಂಗಾಪೂರ ಪೇಟ, ಜವಳಗಲ್ಲಿಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಆಚರಿಸಲಾಗುವುದು.

ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ನೆರವೇರಲಿದ್ದು, ಸಂಜೆ 7 ಗಂಟೆಗೆ ಕಾರ್ತಿಕೋತ್ಸವ ಜರಗುವುದು.

ಸಮಾಜ ಬಾಂಧವರು ಹಾಗೂ ಸಾರ್ವಜನಿಕರು ಆಗಮಿಸಿ ಜಯಂತಿಯನ್ನು ಯಶಸ್ವಿಗೊಳಿಸಬೇಕೆಂದು ಶ್ರೀ



ಶಿವಶರಣ ಮೇದ (ಮೇದಾರ) ಕ್ಷೇಮಾಭಿವೃದ್ಧಿ ಹಾಗೂ ವಿವಿದೋದ್ದೇಶಗಳ ಸೇವಾ ಸಂಘದ ಅಧ್ಯಕ್ಷ ಕುಬೇರ ಎಫ್.ಗುಡದಳ್ಳಿ ಹಾಗೂ ಕಾರ್ಯದರ್ಶಿ ಕರಿಯಪ್ಪ ಮೇದಾರ ವಿನಂತಿಸಿದ್ದಾರೆ.

ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆ । ವಿಜೇತರಿಗೆ ಬಹುಮಾನ ವಿತರಿಸಿದ ಸಚಿವ ಎಚ್.ಕೆ. ಪಾಟೀಲ

# ಯುವ ಸಂಸತ್‌ನಿಂದ ನಾಯಕತ್ವ ಗುಣ ವೃದ್ಧಿ

■ವಿಜಯಸಾಕ್ಷಿ ಸುದ್ದಿ, ಗದಗ

ಪರಿಣಾಮಕಾರಿ ವಿಷಯ ಮಂಡನಾ ಸಾಮರ್ಥ್ಯ ಇರುವವರನ್ನು ಸಮಾಜವು ನಾಯಕ ಎಂದು ಒಪ್ಪಿಕೊಳ್ಳುತ್ತದೆ. ಯುವ ಸಂಸತ್‌ನಲ್ಲಿ ಪಾಲ್ಗೊಂಡವರಲ್ಲಿ ನಾಯಕತ್ವ ಗುಣ ಖಂಡಿತಾ ಮೂಡುತ್ತದೆ. ಅದನ್ನು ಇಂದು ನಡೆದ ಸಂಸತ್ ಕಲಾಪದಲ್ಲಿ ಸಾಬೀತುಪಡಿಸಿದ್ದೀರಿ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದಲ್ಲಿ ಶನಿವಾರ ಜರುಗಿದ ಪ್ರೌಢಶಾಲಾ ಮತ್ತು ಪದವಿಪೂರ್ವ ವಿದ್ಯಾರ್ಥಿಗಳ 'ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ'ಯ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಮಾರೋಪ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಸಂಸತ್ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು ಮುಂದೆ ನಿಶ್ಚಯವಾಗಿ ಶಾಸಕರು, ಸಂಸದರು, ಸ್ಥಳೀಯ ಸಂಸ್ಥೆಯ, ತಾ.ಪಂ,



ಜಿ.ಪಂ ಸದಸ್ಯರು, ಅಧ್ಯಕ್ಷರಾಗುತ್ತೀರಿ ಎಂದು ವಿಶ್ವಾಸ ವ್ಯಕ್ತಪಡಿಸಿದ ಸಚಿವರು, ಯುವಕರು ದೇಶ ಕಟ್ಟುವ ಕಾಯಕದಲ್ಲಿ ಮಹತ್ವದ ಪಾತ್ರ ವಹಿಸಬೇಕು. ನಿಮ್ಮ ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಮೌಲ್ಯಗಳು, ಪ್ರಾಮಾಣಿಕತೆ ಮೈಗೂಡಿಸಿಕೊಂಡು ಸಾಮಾಜಿಕ, ರಾಜಕೀಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾಗಬೇಕು. ರಾಜಕಾರಣಿಗಳ ಕೈ ಹಿಡಿದು ಉತ್ತಮ ಮಾರ್ಗದೆಡೆಗೆ ಸಾಗಿಸುವ ಶಕ್ತಿ ಯುವ ಜನತೆಗಿದೆ. ಅದನ್ನು ತಾವು ನಿರಂತರವಾಗಿ ಮಾಡಬೇಕು ಎಂದು ಸಚಿವರು ತಿಳಿಸಿದರು.

ವಿ.ಪ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಗದಗ ಜಿಲ್ಲೆ ವಿವಿಧ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆ ಮಾಡಿದೆ. ಇಂತಹ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ನಡೆದದ್ದು ಹಾಗೂ ಸಂಸದೀಯ ಸಚಿವರು ಗದಗ ಜಿಲ್ಲೆಯವರು ಎಂಬುದು ಹೆಮ್ಮೆ ತಂದಿದೆ. ಯುವ ಸಂಸತ್ ಸ್ಪರ್ಧೆಯಲ್ಲಿ ಪಾಲ್ಗೊಂಡ ಯುವಕರ ರಾಜಕೀಯ, ಸಾಮಾಜಿಕ ಜೀವನಕ್ಕೆ ಸ್ಫೂರ್ತಿ ನೀಡಲಿದೆ ಎಂದರು.

ಯುವಕರಲ್ಲಿ ಕೀಳರಿಮೆ ಬೇಡ. ನಿಮ್ಮಲ್ಲಿ ದೇವರು ಒಂದಿಲ್ಲೊಂದು ಶಕ್ತಿಯನ್ನು ನೀಡಿರುತ್ತಾರೆ. ಅದನ್ನು ಸರಿಯಾಗಿ ಪರಿಣಾಮಕಾರಿಯಾಗಿ ಸದ್ಬಳಕೆ ಮಾಡಿಕೊಂಡು ಯಶಸ್ಸು ನಿಮ್ಮದಾಗಿಸಿಕೊಳ್ಳಿ. ರಾಷ್ಟ್ರಕ್ಕೆ ನಿಮ್ಮದೇ ಆದ ಸೇವೆ ಸಲ್ಲಿಸಿ ಎಂದರು.

> ಕೇವಲ ಮಾಧ್ಯಮಗಳನ್ನು ತಲೆಯಲ್ಲಿಟ್ಟುಕೊಂಡು ರಾಜಕೀಯ ಮಾಡದೇ, ಪ್ರಾಮಾಣಿಕ, ನೈತಿಕ ನೆಲೆಗಟ್ಟಿನಲ್ಲಿ ಸಾಮಾಜಿಕ ಸೇವೆ ಮಾಡುವ ಮನೋಭಾವನೆ ರೂಡಿಸಿಕೊಳ್ಳಬೇಕು. ನಮ್ಮ ಯೋಜನಾ ಸಾಮರ್ಥ್ಯ ಮಹತ್ತರವಾಗಿಟ್ಟುಕೊಂಡು, ಅದರ ಸಾಕಾರಕ್ಕೆ ನಿರಂತರ ಶ್ರಮವಹಿಸಿ, ಸಮಾಜಕ್ಕೆ ನಮ್ಮದೇ ಆದ ಸೇವೆಯನ್ನು ನೀಡಲು ಯುವಕರು ಮುಂದಾಗಬೇಕು. ಜನಹಿತಕ್ಕಾಗಿ ನಿಮ್ಮ ಅಮೂಲ್ಯವಾದ ಸಮಯವನ್ನು ಮೀಸಲಿಡುವ ಶಪಥವನ್ನು ಮಾಡುವದರೊಂದಿಗೆ, ಪ್ರಾಮಾಣಿಕ ಆಡಳಿತವನ್ನು ಸಮಾಜಕ್ಕೆ ನೀಡುವ ದೃಢ ನಿರ್ಧಾರ ನಿಮ್ಮದಾಗಿಸಿಕೊಳ್ಳಿ.
>
> – ಎಚ್.ಕೆ. ಪಾಟೀಲ.
> ಕಾನೂನು ಸಚಿವರು.

ಹಾಲಕೆರೆ ಮಠದ ಮುತ್ತಿನ ಬಸವಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಸಚಿವರು, ಶಾಸಕರು, ಮುಖ್ಯ ಅತಿಥಿಗಳು ಯುವ ಸಂಸತ್ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

▶▶3 ನೇ ಪುಟಕ್ಕೆ

'ಕರ್ತವ್ಯನಿರತ ಮಹಿಳೆಯರಿಗಾಗಿ ಕಾನೂನು ಜಾಗೃತಿ' ಕಾರ್ಯಕ್ರಮದಲ್ಲಿ ನ್ಯಾ. ಬಸವರಾಜ

# ನಮ್ಮ ಸಮಾಜ ಪರಿವರ್ತನೆ ಹೊಂದಬೇಕಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ವಿರುದ್ಧ ಪ್ರತಿಯೊಬ್ಬರೂ ಪ್ರತಿಭಟಿಸಬೇಕು. ದೌರ್ಜನ್ಯ ನಡೆಯುವ ಘಟನೆಗಳೇನಾದರೂ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅಥವಾ ಸಂಸ್ಥೆಗೆ ಮಾಹಿತಿ ನೀಡುವ ಮೂಲಕ ಮಹಿಳೆಯರ ಹಕ್ಕುಗಳನ್ನು ಕಾಪಾಡಬೇಕು ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಬಸವರಾಜ ನುಡಿದರು.

ಅವರು ಶನಿವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಗದಗ ನ್ಯಾಯಾಲಯದ ಆವರಣದಲ್ಲಿರುವ ಎಡಿಆರ್ ಕಟ್ಟಡದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ನಿವಾರಣೆಯ ಅಂತಾರಾಷ್ಟ್ರೀಯ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ 'ಕರ್ತವ್ಯನಿರತ ಮಹಿಳೆಯರಿಗಾಗಿ ಕಾನೂನು ಜಾಗೃತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಕೆ. ಗುರುಪ್ರಸಾದ ಮಾತನಾಡಿ,



2013ರಲ್ಲಿ ರಚಿಸಲಾದ ಕಾನೂನಿನಂತೆ 10ಕ್ಕಿಂತ ಹೆಚ್ಚು ಜನ ಮಹಿಳಾ ಕೆಲಸಗಾರರಿರುವ ಸಂಸ್ಥೆಯಲ್ಲಿ ಆಂತರಿಕ ದೂರು ನಿರ್ವಹಣಾ ಕಮಿಟಿಯನ್ನು ಕಡ್ಡಾಯವಾಗಿ ರಚಿಸಬೇಕು. 10ಕ್ಕೂ ಕಡಿಮೆ ಇದ್ದರೆ ಅಂತವರಿಗಾಗಿ ಹಾಗೂ ಅಸಂಘಟಿತ ಮಹಿಳಾ ಕೆಲಸಗಾರರಿಗೆ ಜಿಲ್ಲಾಧಿಕಾರಿಗಳು ಸ್ಥಳೀಯ ದೂರು ನಿರ್ವಹಣಾ ಸಮಿತಿಯನ್ನು ರಚಿಸಬೇಕು. ಕಮಿಟಿಯ ಅಧ್ಯಕ್ಷರು ಹಿರಿಯ ಮಹಿಳೆಯರೇ ಆಗಿರಬೇಕು ಎಂದು ಕಾನೂನಿನ ನಿಯಮಗಳ ಬಗ್ಗೆ ವಿವರಿಸಿದರು.

ಬಾಧಿತ ಮಹಿಳೆ ದೌರ್ಜನ್ಯಕ್ಕೊಳಗಾದರೆ 3 ತಿಂಗಳೊಳಗೆ ಕಮೀಟಿಗೆ ದೂರು ಸಲ್ಲಿಸಬೇಕು ಅಥವಾ ಬಾಧಿತಳ ಪರವಾಗಿ, ಅವಳ ಒಪ್ಪಿಗೆಯೊಂದಿಗೆ ಇತರರು 6 ಪ್ರತಿಗಳಲ್ಲಿ ದೂರು ನೀಡಬಹುದಾಗಿದೆ. ಸಕಾರಣದಿಂದ ದೂರು ನೀಡುವುದು ವಿಳಂಬವಾದಲ್ಲಿ ಮತ್ತೆ 3 ತಿಂಗಳುಗಳ ಕಾಲ ಕಾಲಾವಕಾಶ ನೀಡಬಹುದಾಗಿದೆ. ದೂರು ಬಂದ ನಂತರ ಕಮಿಟಿಯು ಸಂಬಂಧಿಸಿದ ವ್ಯಕ್ತಿಗಳಿಗೆ ನೋಟಿಸು ನೀಡುವ ಮೂಲಕ ವಿಚಾರಣೆ ನಡೆಸಬೇಕು. 90 ದಿನಗಳಲ್ಲಿ ಕಮಿಟಿ ನಡೆಸಿದ ವಿಚಾರಣೆಯ ವರದಿ ಹಾಗೂ ಶಿಫಾರಸ್ಸನ್ನು ಸಂಸ್ಥೆ ಮುಖ್ಯಸ್ಥರಿಗೆ ನೀಡಬೇಕು. ಆ ಶಿಫಾರಸ್ಸಿನ ಪ್ರಕಾರ ಸಂಸ್ಥೆ ಮುಖ್ಯಸ್ಥರು 60 ದಿನಗಳೊಳಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ ಮಾತನಾಡಿ, ಸಂವಿಧಾನದಡಿ ನಮಗೆ ದೊರೆತ ಹಕ್ಕುಗಳನ್ನು ಬಳಸಿಕೊಂಡು, ನಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು. ಅಂದಾಗ ಸಂಘರ್ಷಗಳು ಕಡಿಮೆಯಾಗುತ್ತವೆ.

> ನಮ್ಮ ಭಾರತದ ಸಂವಿಧಾನ ಮಹಿಳೆಯರೂ ಸೇರಿದಂತೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿದೆ. ಈ ನಿಟ್ಟಿನಲ್ಲಿ ನಮ್ಮ ಸಮಾಜ ಪರಿವರ್ತನೆ ಆಗಬೇಕಿದೆ. ಹೆಣ್ಣನ್ನು ಗೌರವ ಮನೋಭಾವದಿಂದ ಕಾಣಬೇಕು. ಈ ನಿಟ್ಟಿನಲ್ಲಿ ಮಹಿಳೆಯ ಹಕ್ಕಿನ ಸಂರಕ್ಷಣೆಗೆ ಹಾಗೂ ವಿಶೇಷವಾಗಿ ಕರ್ತವ್ಯನಿರತ ಮಹಿಳೆ ಮೇಲೆ ನಡೆಯುವ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ 2013ರಲ್ಲಿ ವಿಶೇಷ ಕಾನೂನು ರಚಿಸಲಾಗಿದ್ದು, ಈ ಬಗ್ಗೆ ಎಲ್ಲರೂ ಅರಿವು ಹೊಂದಬೇಕು ಎಂದು ನ್ಯಾ. ಬಸವರಾಜ ಸಲಹೆ ನೀಡಿದರು.

▶▶3 ನೇ ಪುಟಕ್ಕೆ

ಎಪಿಎಂಸಿ ಕಂಪೌಂಡ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಡಾ. ಚಂದ್ರು ಲಮಾಣಿ

# ತಂತ್ರಜ್ಞಾನಕ್ಕೆ ತಕ್ಕಂತೆ ಬದಲಾವಣೆಯಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕೃಷಿ ಉತ್ಪನ್ನ ಮಾರುಕಟ್ಟೆಗಳು ರೈತರ ಜೀವನಾಡಿಗಳಂತಿದ್ದು, ಅವುಗಳ ಅಭಿವೃದ್ಧಿಯಾಗಬೇಕು ಮತ್ತು ರೈತರ ಉತ್ಪನ್ನಗಳಿಗೆ ಉತ್ತಮ ದರ, ಶೀಘ್ರ ಸೇವೆ ನೀಡುವಲ್ಲಿ ಪ್ರಸ್ತುತ ತಂತ್ರಜ್ಞಾನಕ್ಕೆ ತಕ್ಕಂತೆ ಬದಲಾವಣೆಯಾಗಬೇಕಿದೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಶನಿವಾರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದ ಸುತ್ತ ಕಂಪೌಂಡ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಪಟ್ಟಣದ ಎಪಿಎಂಸಿ ಮಾರುಕಟ್ಟೆಯು ರಾಜ್ಯದಲ್ಲಿ ಉತ್ತಮ ವ್ಯಾಪಾರ-ವಹಿವಾಟಿಗೆ ಹೆಸರಾಗಿದೆ. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಿಶಾಲವಾದ ಪ್ರಾಂಗಣಕ್ಕೆ ಕಂಪೌಂಡ್ ನಿರ್ಮಿಸುವ ಕಾರ್ಯಕ್ಕೆ ಇದೀಗ ಕಾಲ ಕೂಡಿ ಬಂದಿದೆ. ಕೃಷಿ ಉತ್ಪನ್ನ ಮಾರುಕಟ್ಟೆ



ಸಮಿತಿಯಿಂದ 1.60 ಕೋಟಿ ರೂಗಳ ವೆಚ್ಚದಲ್ಲಿ ಅಂದಾಜು 1600 ಮೀಟರ್ ಕಂಪೌಂಡ್ ಗೋಡೆ ನಿರ್ಮಾವಾಗಲಿದೆ. ಪಟ್ಟಣದ ಎಪಿಎಂಸಿ ಅಭಿವೃದ್ಧಿಗೆ ಸರಕಾರದಿಂದ ಹೆಚ್ಚಿನ ಅನುದಾನವನ್ನು ತಂದು ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ಕೈಕೊಳ್ಳಲಾಗುವುದೆಂದರು.

ಈ ವೇಳೆ ಪುರಸಭೆ ಸದಸ್ಯ ಪ್ರವೀಣ ಬಾಳಿಕಾಯಿ, ಗೋವನಾಳ ಗ್ರಾ.ಪಂ ಅಧ್ಯಕ್ಷ ಮಂಜನಗೌಡ ಕೆಂಚನಗೌಡ್ರ, ವರ್ತಕರ ಸಂಘದ ಕಾರ್ಯದರ್ಶಿ ಎಸ್. ಕೆ. ಕಾಳಪ್ಪನವರ, ವ್ಯಾಪಾರಸ್ಥರಾದ ಬಸಣ್ಣ ಮಹಾಂತಶೆಟ್ಟರ, ವಿಜಯಕುಮಾರ ಹತ್ತಿಕಾಳ, ಗಂಗಾಧರ ಮೆಣಸಿನಕಾಯಿ, ಮಲ್ಲನಗೌಡ ಪಾಟೀಲ, ಈರಣ್ಣ ಆಕ್ಕೂರ, ವಿಜಯ ಬೂದಿಹಾಳ, ನವೀನ ಬೆಳ್ಳಟ್ಟಿ, ಗಿರೀಶ ಚೌರಡ್ಡಿ, ಬಸವರಾಜ ಚಕ್ರಸಾಲಿ, ಭೀಮಣ್ಣ ಯಂಗಾಡಿ, ಈರಣ್ಣ ಕ್ಯಾಲಕೊಂಡ, ಶಿವಯೋಗಿ ವಡಕಣ್ಣನವರ ಸಂತೋಷ ಜಾವೂರ, ರಾಜಶೇಖರ ಶಿಗ್ಲಿಮಠ, ಬಸವರಾಜ ಕೊಂಚಿಗೇರಿ, ಎಪಿಎಂಸಿ ಕಾರ್ಯದರ್ಶಿ ಎಸ್.ವಿ. ಮಠದ ಸೇರಿದಂತೆ ಗುತ್ತಿಗೆದಾರರು ಇದ್ದರು.

ಪಿ.ಸಿ. ಶಾಬಾದಿಮಠರ ನಿವಾಸದಲ್ಲಿ ಆಶೀರ್ವಚನವಿತ್ತ ಶ್ರೀ ರಂಭಾಪುರಿ ಜಗದ್ಗುರುಗಳು

# ಧರ್ಮಾಚರಣೆಯಿಂದ ಜೀವನ ಉಜ್ವಲ

■ವಿಜಯಸಾಕ್ಷಿ ಸುದ್ದಿ, ಗದಗ

ಜೀವನದ ಶ್ರೇಯಸ್ಸಿಗೆ ಧರ್ಮವೇ ಮೂಲ. ಆಡುವ ಮಾತು ನಡೆಯುವ ದಾರಿ ಒಂದಾದಾಗ ಬದುಕಿಗೆ ಬೆಲೆ ಬರುತ್ತದೆ. ಧರ್ಮ ಪರಿಪಾಲನೆಯಿಂದ ಜೀವನ ಉಜ್ವಲಗೊಳ್ಳುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ಗಂಜಿಬಸವೇಶ್ವರ ದೇವಸ್ಥಾನದ ಹತ್ತಿರದ ಉಸುಗಿನಗಟ್ಟಿ ಓಣಿಯಲ್ಲಿ ಪಿ.ಸಿ. ಶಾಬಾದಿಮಠ ಅವರು ನಿರ್ಮಿಸಿದ 'ಹಿರಿಯರ ಕೃಪಾ' ನಿವಾಸದಲ್ಲಿ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಆಶೀರ್ವಚನ ನೀಡುತ್ತಿದ್ದರು.

ವೀರಶೈವ ಧರ್ಮದಲ್ಲಿ ದೇವರನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುತ್ತಾರೆ. ಇಷ್ಟಲಿಂಗಾರ್ಚನೆಯಿಂದ ಎಲ್ಲ ಅನಿಷ್ಟಗಳು ದೂರವಾಗಿ, ಇಷ್ಟಾರ್ಥಗಳು ದೊರಕುತ್ತವೆ. ಶಿವನನ್ನು ಪೂಜಿಸಿದರೆ ಸಕಲ ದೇವಾನು ದೇವತೆಗಳನ್ನು



ಪೂಜಿಸಿದ ಫಲ ದೊರಕುತ್ತದೆ. ವೀರಶೈವ ಧರ್ಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ದಶಧರ್ಮ ಸೂತ್ರಗಳನ್ನು ಬೋಧಿಸಿ ಸಕಲರನ್ನು ಉದ್ಧರಿಸಿದ್ದಾರೆ. ಅವರ ಮೌಲ್ಯಾಧಾರಿತ ಚಿಂತನಗಳು ಸಕಲರ ಶ್ರೇಯಸ್ಸಿಗೆ ಸಹಕಾರಿಯಾಗಿವೆ. ಮಹಿಳೆಯರಿಂದ ಭಾರತೀಯ ಸಂಸ್ಕೃತಿ ಬೆಳೆದುಕೊಂಡು ಬಂದಿದೆ. ಮುತ್ತೈದೆಯರಿಗೆ ಹಸಿರು ಬಳೆ, ಕುಂಕುಮ, ಕರಿಮಣಿ ಸರ, ಮೂಗುತಿ, ಕಾಲುಂಗುರ ಮತ್ತು ಮಾಂಗಲ್ಯ ಕರುಣಿಸಿದ ಕೀರ್ತಿ ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಸಲ್ಲುತ್ತದೆ ಎಂದರು.

> ಆಧುನಿಕತೆ ಹೆಸರಿನಲ್ಲಿ ಸಂಸ್ಕೃತಿ ಸಭ್ಯತೆಗಳು ನಾಶಗೊಳ್ಳಬಾರದು. ಅರಿವುಳ್ಳ ಮಾನವ ಜನ್ಮದಲ್ಲಿ ಒಂದಿಷ್ಟಾದರೂ ಶಿವಜ್ಞಾನದ ಅರಿವು ಆಚರಣೆಗಳನ್ನು ಅನುಸರಿಸಿ ಬಾಳಬೇಕಾಗುತ್ತದೆ. ನಾವು ನಿಂತ ನೆಲ, ಕುಡಿಯುವ ನೀರು, ತಿನ್ನುವ ಅನ್ನ, ಉಸಿರಾಡುವಂಥ ಗಾಳಿ ದೇವರ ಅಮೂಲ್ಯ ಕೊಡುಗೆ. ಏನೆಲ್ಲ ಸಂಪನ್ಮೂಲ ಕೊಟ್ಟ ಭಗವಂತನನ್ನು ದಿನದಲ್ಲಿ ಎರಡು ನಿಮಿಷ ಸ್ಮರಿಸಿ ಪೂಜಿಸಿದರೆ ಜನ್ಮ ಸಾರ್ಥಕಗೊಳ್ಳುತ್ತದೆ.
>
> – ಶ್ರೀ ಡಾ. ವೀರಸೋಮೇಶ್ವರ ಜಗದ್ಗುರುಗಳು.
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಕಾನೂನು ಸಂಸದೀಯ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್. ಕೆ. ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು, ಮಾಜಿ ಶಾಸಕ ಡಿ.ಆರ್. ಪಾಟೀಲ, ಹುಬ್ಬಳ್ಳಿಯ ಜಿ.ಎಂ. ಚಿಕ್ಕಮಠ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಆಶೀರ್ವಾದ ಪಡೆದರು. ಪ್ರಶಾಂತ ಶಂಕ್ರಯ್ಯ ಶಾಬಾದಿಮಠ ಸ್ವಾಗತಿಸಿದರು. ಪ್ರಸನ್ನ ರೇಣುಕಸ್ವಾಮಿ ಚಂದ್ರಶೇಖರಯ್ಯ ಶಾಬಾದಿಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

## ಸಂಪಾದಕೀಯ

### ಕಳ್ಳನನ್ನು ಹಿಡಿಯುವ ಕೆಲಸ ಆಗಲಿ

ತಂತ್ರಜ್ಞಾನ ಬಳಸಿಕೊಂಡು ನಟಿ ರಶ್ಮಿಕಾ ಮಂದಣ್ಣ ಅವರ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಸದ್ದು ಮಾಡಿದ ನಂತರ ಡೀಪ್ ಫೇಕ್ ನಂತಹ ಅಕ್ಷೇಪಾರ್ಹ ವಿಡಿಯೋಗಳ ಕುರಿತು ಸಾಕಷ್ಟು ಚರ್ಚೆಯಾಗುತ್ತಿದೆ.

ನಟಿಯೊಬ್ಬರ ವಿಡಿಯೋ ಹೊರಬರುತ್ತಲೆ ಬಾಲಿವುಡ್ ಹಿರಿಯ ನಟ ಅಮಿತಾಬ್ ಬಚ್ಚನ್ ಡೀಪ್ ಫೇಕ್ ಕುರಿತು ಆಕ್ರೋಶ ವ್ಯಕ್ತಪಡಿಸಿದರು. ಅದಾದ ನಂತರ ಡೀಪ್ ಫೇಕ್ ಕುರಿತು ಇಡೀ ದೇಶಾದ್ಯಂತ ಚರ್ಚೆ ಶುರುವಾಯಿತು. ಅಕ್ಷೇಪಾರ್ಹ ತಂತ್ರಜ್ಞಾನ ಕಡಿವಾಣಕ್ಕೆ ಒತ್ತಾಯಗಳು ವ್ಯಕ್ತವಾದವು.

ಡೀಪ್ ಫೇಕ್ ನಂತಹ ತಂತ್ರಜ್ಞಾನಗಳಿಂದ ಯಾರಿಗಾದರೂ ಹಾನಿ ಉಂಟಾಗಿದ್ದರೆ ಐಟಿ ನಿಯಮಗಳ ಉಲ್ಲಂಘನೆ ಅಡಿ ದೂರು ದಾಖಲಿಸಲು ಅವಕಾಶವಿದೆ. ಸೈಬರ್ ಕ್ರೈಮ್ ಪೊಲೀಸರು ಇಂತಹ ದೂರುಗಳ ಬಗ್ಗೆ ತನಿಖೆ ನಡೆಸಲಿದ್ದಾರೆ. ಅನೇಕ ಪ್ರಕರಣಗಳ ಬಗ್ಗೆ ತನಿಖೆಯೂ ನಡೆಯುತ್ತಿದೆ.

ಆದರೆ ಕೇಂದ್ರ ಸರ್ಕಾರ ಇಂತಹ ಅಕ್ಷೇಪಾರ್ಹ ತಂತ್ರಜ್ಞಾನವನ್ನು ನಿಷೇಧಿಸುವ ನಿಟ್ಟಿನಲ್ಲಿ ಮುಂದಡಿ ಇಟ್ಟಿದೆ. ಡೀಪ್ ಫೇಕ್ ರೀತಿಯ ತಂತ್ರಜ್ಞಾನದಿಂದ ಸಂಕಷ್ಟ ಎದುರಿಸುವ ಜನರಕ್ಷಣೆಗೆ ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಲು ಸರ್ಕಾರ ಮುಂದಾಗಿದೆ.

ಸರಕಾರದ ಈ ನಿರ್ಧಾರ ಸ್ವಾಗತಾರ್ಹ. ಆದರೆ ಇಂಥ ಕೃತ್ಯ ನಡೆಸಿದವರ ಪತ್ತೆಗೆ ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಟಿ ರಶ್ಮಿಕಾ ಮಂದಣ್ಣ ವಿಡಿಯೋ ಹೊರಬಂದು ತಿಂಗಳುಗಳೆ ಕಳೆದವು. ದೂರು ದಾಖಲಾದರೂ ಯಾವುದೇ ಕ್ರಮವಾದಿರುವುದು ತಪ್ಪಿತಸ್ಥರು ಯಾರು ಎನ್ನುವುದು ಈವರೆಗೂ ಗೊತ್ತಾಗಿಲ್ಲ.

ಇದು ಕೇವಲ ನಟಿ ರಶ್ಮಿಕಾ ಮಂದಣ್ಣ ಅವರೊಬ್ಬರ ಪ್ರಕರಣ ಮಾತ್ರವಲ್ಲ. ಈ ಹಿಂದಿನ ಅನೇಕ ಸೈಬರ್ ಅಪರಾಧಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ. ಅಸಲಿಗೆ ತಪ್ಪಿತಸ್ಥರು ಯಾರು? ತಂತ್ರಜ್ಞಾನದ ಮೂಲ ಯಾವುದು ಎನ್ನುವುದು ಗೊತ್ತಾಗಿಲ್ಲ. ಸೈಬರ್ ಪೊಲೀಸ್ ವ್ಯವಸ್ಥೆ ಇಷ್ಟೊಂದು ಬಲಹೀನ ಆಗಿರುವುದಕ್ಕೆ ಇಂಥ ಕೃತ್ಯಗಳು ನಡೆಯುತ್ತಿವೆ. ಮುಂದೆಯೂ ನಡೆಯುತ್ತವೆ.

ತಂತ್ರಜ್ಞಾನ ಬಳಸಿಕೊಂಡು ಮಾನಹಾನಿ ನಡೆಸುವಂಥ ಸೈಬರ್ ವಂಚಕರನ್ನು ಪತ್ತೆ ಹಚ್ಚಿ, ಶಿಕ್ಷೆಗೆ ಗುರಿಪಡಿಸದ ಹೊರತು ಇಂಥ ಕೃತ್ಯಗಳಿಗೆ ಕಡಿವಾಣ ಹಾಕಲು ಸಾಧ್ಯವಿಲ್ಲ. ಮೊದಲು ಕಳ್ಳನನ್ನು ಹಿಡಿಯುವ ಕೆಲಸ ಆಗಬೇಕು. ಅದಾದ ನಂತರ ಕಳ್ಳತನ ತಡೆಗೆ ಕಾನೂನು ತರಬೇಕು.

ಇಂದು ಭಾರತೀಯ ಸಂವಿಧಾನ ದಿನ(ಕಾನೂನು ದಿನ)ದ ಪ್ರಯುಕ್ತ ಲೇಖನ

# ವೈವಿಧ್ಯಗಳ ಸಂಗಮ ನಮ್ಮ ಸಂವಿಧಾನ

ಸಂವಿಧಾನವು ದೇಶದ ಜನರನ್ನು ಆಳುವ ಸರಕಾರದ ಮೂಲ ರಚನೆಯನ್ನು ನಿರ್ದಿಷ್ಟಪಡಿಸುತ್ತದೆ. ನಮ್ಮ ಸಂವಿಧಾನ ವೈವಿಧ್ಯಗಳ ಸಂಗಮವಾಗಿದ್ದು, ಅದು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಸರಕಾರದ ಮೂರು ಮುಖ್ಯ ಅಂಗಗಳಾಗಿ ಏರ್ಪಡಿಸುತ್ತದೆ. ಸಂವಿಧಾನವು ಪ್ರತಿ ಅಂಗದ ಅಧಿಕಾರದ ವ್ಯಾಖ್ಯೆಯನ್ನು ನೀಡುವುದಲ್ಲದೆ, ಅವುಗಳ ಜವಾಬ್ದಾರಿಯನ್ನೂ ಖಚಿತಗೊಳಿಸುತ್ತದೆ.

ನವೆಂಬರ್ 26ರಂದು ಭಾರತದಲ್ಲಿ 'ಸಂವಿಧಾನ ದಿನ' ಎಂದು ಆಚರಿಸಲಾಗುತ್ತದೆ. ಭಾರತದ ಸಂವಿಧಾನವನ್ನು ಅಳವಡಿಸಿಕೊಂಡ ಸಂದರ್ಭದ ಸ್ಮರಣೆಗಾಗಿ ಈ ದಿನವನ್ನ ಆಚರಿಸಲಾಗುತ್ತದೆ. 1949ರ ಈ ದಿನದಂದು ಭಾರತದ ಕಾನ್ಸ್‌ಟಿಟ್ಯೂಯೆಂಟ್ ಅಸೆಂಬ್ಲಿ (ಸಂವಿಧಾನ ರೂಪಿಸಲು ರಚಿಸಲಾಗಿದ್ದ ಸಭೆ) ಸಂವಿಧಾನವನ್ನು ಅಧಿಕೃತವಾಗಿ ಅಳವಡಿಸಿತು.

ಕುತೂಹಲಕ ವಿಷಯ ಎಂದರೆ, ಸಂವಿಧಾನ ದಿನ ಎಂದು ಆಚರಣೆ ಶುರುವಾಗಿದ್ದು 2015ರಿಂದ. ಅದಕ್ಕೂ ಮುನ್ನ ಕಾನೂನು ದಿನವಾಗಿ ಆಚರಿಸಲಾಗುತ್ತಿತ್ತು. 1930ರಲ್ಲಿ ಅಂದಿನ ಕಾಂಗ್ರೆಸ್‌ನ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯಕ್ಕೆ ಪಣ ತೊಡಲಾಯಿತು. ಆ ಐತಿಹಾಸಿಕ ದಿನ ಕೂಡ ನ.26 ಆಗಿದೆ. ಇನ್ನು, ಕಾನ್ಸ್‌ಟಿಟ್ಯುಯೆಂಟ್ ಅಸೆಂಬ್ಲಿ ಅಥವಾ ಸಂವಿಧಾನ ರಚನಾ ಸಭೆಯನ್ನು ರೂಪಿಸಿದ್ದು 1946ರಲ್ಲಿ. ಆಗ ಭಾರತದ ಭಾಗವಾಗಿದ್ದ ಪಾಕಿಸ್ತಾನ, ಬಾಂಗ್ಲಾದೇಶದಿಂದಲೂ ಪ್ರತಿನಿಧಿಗಳು ಈ ಸಭೆಯಲ್ಲಿದ್ದರು. ವಿಭಜನೆ ಆದ ಬಳಿಕ ಅವೆರಡು ದೇಶಗಳು ಪ್ರತ್ಯೇಕ ಸಂವಿಧಾನ ರಚನೆ ಮಾಡಿದವು.






ಭಾರತ 1950, ಜನವರಿ 26ರಂದು ಅಧಿಕೃತವಾಗಿ ಸಂವಿಧಾನವನ್ನು ಅಳವಡಿಕೆ ಮಾಡಿಕೊಂಡಿತು. ಆದರೆ, ಸಂವಿಧಾನವನ್ನು ಅಧಿಕೃತವಾಗಿ ಸ್ವೀಕರಿಸಿದ್ದು 1949, ನ. 26ರಂದು. 1947ರಲ್ಲಿ ಭಾರತವು ಬ್ರಿಟಿಷ್ ಸರ್ಕಾರದಿಂದ ಸ್ವಾತಂತ್ರ್ಯವನ್ನು ಪಡೆದ ನಂತರ, ಸಂವಿಧಾನ ಸಭೆಯ ಸದಸ್ಯರು ರಾಷ್ಟ್ರದ ಮೊದಲ ಸಂಸತ್ತಾಗಿ ಸೇವೆ ಸಲ್ಲಿಸಿದರು. ನವೆಂಬರ್ 19, 2015ರಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನವೆಂಬರ್ 26ನ್ನು 'ಸಂವಿಧಾನ ದಿನ' ಎಂದು ಆಚರಿಸಲು ಭಾರತ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿತು.


ಎಲ್ಲಾ ಕಾನೂನಿಗಿಂತ ಸಂವಿಧಾನವೇ ಮಿಗಿಲು. ಹೀಗಾಗಿ, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಕಾನೂನು ರೂಪಿಸಲು ಸಾಧ್ಯವಿಲ್ಲ. ಭಾರತವನ್ನು ಸಾರ್ವಭೌಮ, ಜಾತ್ಯತೀತ, ಸಮಾಜವಾದಿ ಮತ್ತು ಪ್ರಜಾಸತ್ತಾತ್ಮಕ ಗಣತಂತ್ರ ದೇಶ ಎಂದು ಸಂವಿಧಾನದಲ್ಲಿ ಘೋಷಿಸಲಾಗಿದೆ. ಇಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯ ಒದಗಿಸಲಾಗಿದೆ. ಭಾರತದ ಸಂವಿಧಾನವನ್ನು ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

ನಮ್ಮ ದೇಶದ ಸಂವಿಧಾನ ರಚನೆಯಲ್ಲಿ ಡಾ.ಭೀಮರಾವ್ ಅಂಬೇಡ್ಕರ್ ಅವರ ಕೊಡುಗೆ ಪ್ರಮುಖವಾಗಿದೆ. ಆದ್ದರಿಂದ ಡಾ.ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವ ಸಂಕೇತವಾಗಿ ಸಂವಿಧಾನ ದಿನಾಚರಣೆಯನ್ನು ಸಹ ಆಚರಿಸಲಾಗುತ್ತದೆ. ದೇಶದ ಯುವ ಪೀಳಿಗೆಯಲ್ಲಿ ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಗೌರವದ ಭಾವನೆಯನ್ನು ಮೂಡಿಸುವ ಉದ್ದೇಶ ಇದರ ಹಿಂದೆ ಇದೆ.

2 ವರ್ಷ 11 ತಿಂಗಳು, 17 ದಿನಗಳ ಅವಧಿಯಲ್ಲಿ ರಚಿಸಿದ ಸಂವಿಧಾನ ನಮ್ಮದಾಗಿದೆ. ಭಾರತ ಸಂವಿಧಾನ ಅತಿದೊಡ್ಡ ಕೈಬರವಣಿಗೆಯ ಡಾಕ್ಯುಮೆಂಟ್ ಹೊಂದಿರುವ ಸಂವಿಧಾನವಾಗಿದ್ದು, ಇಂಗ್ಲಿಷ್‌ನಲ್ಲಿ ಒಟ್ಟು 1,17,369 ಪದಗಳನ್ನು ಹೊಂದಿದೆ. ಕೈ ಬರವಣಿಗೆಯಲ್ಲಿ ಬರೆದ ಮೂಲ ಸಂವಿಧಾನ ಪುಸ್ತಕವನ್ನು ಸಂಸತ್ತಿನ ಗ್ರಂಥಾಲಯದಲ್ಲಿ ಹೀಲಿಯಂನಿಂದ ಕೂಡಿದ ಕೇಸ್‌ನಲ್ಲಿ ಸುರಕ್ಷಿತವಾಗಿ ಇಡಲಾಗಿದೆ.

ನವೆಂಬರ್ 26, 1949 ರಂದು ಸಿದ್ಧಪಡಿಸಲಾದ ನಮ್ಮ ಸಂವಿಧಾನವನ್ನು ಜನವರಿ 26, 1950 ರಂದು ಜಾರಿಗೆ ತರಲಾಯಿತು. ಈ ದಿನವನ್ನು ಗಣರಾಜ್ಯೋತ್ಸವ ದಿನ ಎಂದು ಆಚರಿಸಲಾಗುತ್ತದೆ. ಜನಸಾಮಾನ್ಯರಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಲು ಸಂವಿಧಾನ ದಿನವನ್ನು ಬಳಸಿಕೊಳ್ಳಲಾಗುತ್ತಿದೆ.

ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ನೆಲೆಸಬೇಕಾದರೆ ದೇಶಕ್ಕೆ ಸಂವಿಧಾನ ಅಗತ್ಯ. ಸಂವಿಧಾನದ ಅಗತ್ಯ ಏನು ಎಂದು ಪ್ರಶ್ನಿಸುವವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಆಶಯ ಅರ್ಥವಾದರೆ ಮಾತ್ರ ಅದರ ಅವಶ್ಯಕತೆಯ ಅರಿವಾಗುತ್ತದೆ.



–ಎಂ.ಎಚ್. ಸವದತ್ತಿ.
ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ–ಏಕಲಾಸಪೂರ.

ಇಂದು 'ರಾಷ್ಟ್ರೀಯ ಹಾಲು ದಿನ'ದ ನಿಮಿತ್ತ ವಿಶೇಷ ಲೇಖನ

# ಹಾಲು ಕುಡಿದು ಆರೋಗ್ಯವಂತರಾಗಿ

ಹಾಲು, ಹುಟ್ಟಿದ ಕೂಸಿನಿಂದ ಹಿಡಿದು ಮಾನವನ ಜೀವನದ ಕೊನೆಯವರೆಗೂ ಅವಶ್ಯಕ ಪೌಷ್ಟಿಕಾಂಶವನ್ನು ಹೊಂದಿರುವ ದ್ರವ ರೂಪದ ಸಮತೋಲಿತ ಆಹಾರ. ಉತ್ತಮ ಆರೋಗ್ಯಕ್ಕಾಗಿ ಹಾಲು ಅತ್ಯಗತ್ಯ. ಹಾಲು ಮತ್ತು ಡೈರಿ ಉತ್ಪನ್ನಗಳ ಸೇವನೆಯಿಂದ ಜನರಿಗೆ ಆಗುವ ಪ್ರಯೋಜನಗಳನ್ನು ಉತ್ತೇಜಿಸಲು, ಭಾರತದಾದ್ಯಂತ ಅದರ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಲು ಹಾಗೂ ರಾಷ್ಟ್ರ ಮಟ್ಟದಲ್ಲಿ ಕ್ಷೀರ ಕ್ರಾಂತಿಗೆ ನಾಂದಿ ಹಾಡಿದ ಭಾರತದ 'ಕ್ಷೀರ ಕ್ರಾಂತಿಯ ಪಿತಾಮಹ' ಡಾ.ವರ್ಗೀಸ್ ಕುರಿಯನ್ ಅವರ ಜನ್ಮದಿನವನ್ನು ಸ್ಮರಣೀಯವಾಗಿಸಲು ಪ್ರತಿವರ್ಷ ನವೆಂಬರ್ 26ರಂದು 'ರಾಷ್ಟ್ರೀಯ ಹಾಲಿನ ದಿನ'ವನ್ನಾಗಿ ಆಚರಿಸಲಾಗುತ್ತದೆ.

ಇಂದು ಭಾರತದ ಹಾಲು ಉತ್ಪಾದನಾ ಕ್ಷೇತ್ರದಲ್ಲಿ ಸ್ಮರಣೀಯ ದಿನ. ರಾಷ್ಟ್ರ ಮಟ್ಟದಲ್ಲಿ ಕ್ಷೀರ ಕ್ರಾಂತಿಗೆ ನಾಂದಿ ಹಾಡಿದ ದಿನ. ಭಾರತೀಯ ಡೈರಿ ಸಂಘವು 2014ರಲ್ಲಿ ಮೊದಲ ಬಾರಿ ರಾಷ್ಟ್ರೀಯ ಕ್ಷೀರ ದಿನವನ್ನು ಆಚರಿಸಲು ಮುಂದಾಯಿತು. 2014ರ ನವೆಂಬರ್ 26ರಂದು ಮೊದಲ ಬಾರಿ ಈ ದಿನವನ್ನು ಆಚರಿಸಲಾಯಿತು. ರಾಷ್ಟ್ರೀಯ ಹಾಲು ದಿನಾಚರಣೆ ಅಲ್ಲದೆ, ವಿಶ್ವದಾದ್ಯಂತ ಪ್ರತೀ ವರ್ಷ ಜೂನ್ 1ರಂದು 'ವಿಶ್ವ ಹಾಲಿನ ದಿನ'ವನ್ನೂ ಆಚರಿಸಲಾಗುತ್ತಿದೆ.

ಕುರಿಯನ್ ಅವರು ಹೈನು ಉದ್ಯಮಕ್ಕೆ ಶ್ರಮಿಸಿದ್ದಾರೆ. ದೇಶವು ಅಧಿಕ ಹಾಲು ಉತ್ಪಾದಕ ಕೇಂದ್ರಗಳನ್ನು ಹೊಂದಿ, ಸ್ವಾವಲಂಬಿಯಾಗಬೇಕು ಎಂಬುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಕುರಿಯನ್ ಅವರು ಅಮುಲ್ ಮಾದರಿ ಹೈನುಗಾರಿಕೆ, ಹೊನಲು ಕಾರ್ಯಾಚರಣೆ ಆರಂಭಿಸಿದ್ದು, ಇದು ಭಾರತದಲ್ಲಿ ಯಶಸ್ವಿಯಾಯಿತು. ಈ ಮೂಲಕ ಗ್ರಾಮೀಣ ಹೈನುಗಾರಿಕೆ ಕ್ಷೇತ್ರವೂ ಅಭಿವೃದ್ಧಿ ಪಥದತ್ತ ಸಾಗಿತು. ಹೀಗಾಗಿ ಕುರಿಯನ್ ಅವರು 'ರಾಷ್ಟ್ರೀಯ ಕ್ಷೀರ ಕ್ರಾಂತಿಯ ಪಿತಾಮಹ'



ಎಂದು ಹೆಸರಾದರು.

ವಿಶ್ವದಲ್ಲಿಯೇ ಹಾಲು ಉತ್ಪಾದನೆಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು, ಇದಕ್ಕೆ ಉತ್ತಮ ಗುಣಮಟ್ಟದ ಹಾಲಿನ ಡೈರಿಗಳ ಉತ್ಪನ್ನಗಳೇ ಕಾರಣ. ಡಾ.ವರ್ಗೀಸ್ ಕುರಿಯನ್ ಅವರ ನಿರಂತರ ಪರಿಶ್ರಮದ ಫಲವಾಗಿ ಭಾರತ ಹೈನುಗಾರಿಕೆಯಲ್ಲಿ ಮೊದಲ ಸ್ಥಾನದಲ್ಲಿದೆ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಡಾ. ಕುರಿಯನ್ ಅವಿರತವಾಗಿ ಶ್ರಮಿಸಿದ್ದಾರೆ. ಅವರು, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಹತ್ವವನ್ನು ಜನಸಾಮಾನ್ಯರಿಗೆ ಅದರಲ್ಲಿಯೂ ಯುವಜನತೆ ಮತ್ತು ಮಕ್ಕಳಿಗೆ ತಿಳಿಸುವ ನಿಟ್ಟಿನಲ್ಲಿ ಅವರು ಕ್ಷೀರ ಉದ್ಯಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಹಾಲು ಪೋಷಕಾಂಶಗಳಿಂದ ಕೂಡಿದ್ದು, ಹಾಲಿನಿಂದ ಮಾನವ ಶರೀರದ ಬೆಳವಣಿಗೆ ಹಾಗೂ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಬೇಕಾಗುವ ಎಲ್ಲಾ ಪೋಷಕಾಂಶಗಳು ಸಿಗುತ್ತವೆ. ಹಾಲು ದೇಹದಲ್ಲಿನ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಹಾಲಿನಲ್ಲಿ ಸಸಾರಜನಕ, ಪ್ರೋಟಿನ್, ಜಿಡ್ಡು, ಸಕ್ಕರೆ ಮತ್ತು ಪಿಷ್ಟ–ಕಾರ್ಬೋಹೈಡ್ರೇಟ್, ಲವಣಗಳು, ಮಿನರಲ್, ಜೀವಸತ್ವಗಳು ಹಾಗೂ ನೀರಿನಾಂಶ ಇರುತ್ತದೆ. ಹಾಲು ಮೂಳೆಗಳ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಮಕ್ಕಳಲ್ಲಿ ಮೂಳೆ ಮತ್ತು ಹಲ್ಲುಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಈ ಉಪಕ್ರಮವು ಗ್ರಾಮೀಣ ಆದಾಯವನ್ನು ಹೆಚ್ಚಿಸುತ್ತದೆ.

2016–17ರಲ್ಲಿ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಕ ರಾಷ್ಟ್ರವಾಗಿ ಹೊರ ಹೊಮ್ಮಿದೆ. ಒಟ್ಟಾರೆಯಾಗಿ ಹಾಲು ಒಂದು ಪರಿಪೂರ್ಣವಾದ ಆಹಾರ. ಜೀವನವನ್ನು ಉಳಿಸಿಕೊಳ್ಳಲು ಅಗತ್ಯವಾದ ಮೂಲಭೂತ ವಸ್ತುಗಳಲ್ಲಿ ಒಂದು ಸೂರ್ಯನ ಬೆಳಕು, ಇನ್ನೊಂದು ಹಾಲು. ಹಾಗಾಗಿ ಹಾಲು ಹುಟ್ಟಿದ ಮಗುವಿನಿಂದ ವೃದ್ಧರವರೆಗೆ ದೈನಂದಿನ ಜೀವನದಲ್ಲಿ ಅವಶ್ಯಕವಾಗಿರುವ ಪೌಷ್ಟಿಕಾಂಶವನ್ನು ಹೊಂದಿರುವ ಸಮತೋಲಿತ ಆಹಾರ ಎನ್ನಬಹುದು. 'ಹಾಲು ಕುಡಿ ಚಡ್ಡು ಹೊಡಿ' ಅಂತ ಶಾಲೆಗಳಲ್ಲಿ ಹೇಳುತ್ತಿದ್ದ ಘೋಷಣೆ ಹಾಲಿನ ಮಹತ್ವವನ್ನು ಆಗಲೇ ನಾವು ತಿಳಿದುಕೊಂಡಿದ್ದೆವು. ಈಗಲೂ ಸಹ ಸರ್ಕಾರಿ ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯಡಿ ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ ಸರ್ಕಾರಗಳು ಹಾಲು ನೀಡುತ್ತಾ ಬಂದಿವೆ.



– ಬಸವರಾಜ ಎಮ್.ಯರಗುಪ್ಪಿ.
ಲಕ್ಷ್ಮೇಶ್ವರ–ಗದಗ.

## ಕಾಂಗ್ರೆಸ್ ಸರ್ಕಾರ, ದರೋಡೆಕೋರರನ್ನು ರಕ್ಷಣೆ ಮಾಡಲೆಂದೇ ಇದೆ: ಕುಮಾರಸ್ವಾಮಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಾಂಗ್ರೆಸ್ ಸರ್ಕಾರದ ಧ್ಯೇಯ ದರೋಡೆಕೋರರ ರಕ್ಷಣೆಗೆ ಇದೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಟೀಕೆ ಮಾಡಿದ್ದಾರೆ.

ಈ ಸಂಬಂಧ ಮಾತನಾಡಿದ ಅವರು,ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ವಿರುದ್ಧದ ಸಿಬಿಐ ಕೇಸ್ ವಾಪಸ್ ಪಡೆಯಲು ಸಂಪುಟ ಅನುಮೋದನೆ ನೀಡಿದ ಕುರಿತು ಈ ಪ್ರತಿಕ್ರಿಯೆ ನೀಡಿದರು.

ಮರ್ಯಾದೆ ಇರುವವರು ಹೆದರುತ್ತಾರೆ. ಮರ್ಯಾದೆ ಇಲ್ಲದವರಿಗೆ ಕೋರ್ಟ್‌ನಲ್ಲಿ ಇದ್ದರೇನು? ಯಾವುದಲ್ಲಿದ್ದರೆ ಏನು? ಯಾವುದನ್ನು ಬೇಕಾದರೂ ಕೊಂಡುಕೊಳ್ಳುತ್ತೇವೆ ಎನ್ನುವ ದುರಹಂಕಾರ ದಲ್ಲಿರುತ್ತಾರೆ. ಅಂತಹವರಿಗೆ ಏನು ಹೇಳುವುದು ಎಂದು ವ್ಯಂಗ್ಯವಾಡಿದರು.



## ರಾಜ್ಯದ ಅಟ್ಯಾಪಟ್ಯಾ ತಂಡಕ್ಕೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀಮತಿ ಕಮಲ ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಮೌನೇಶ್ವರಿ ಹನುಮಂತ ಗೌಡರ ನ.27ರಿಂದ 29ರವರೆಗೆ ಚೆನ್ನೈನಲ್ಲಿ ನಡೆಯಲಿರುವ 'ರಾಷ್ಟ್ರೀಯ ಅಟ್ಯಾಪಟ್ಯಾ ಚಾಂಪಿಯನ್‌ಶಿಪ್'ನಲ್ಲಿ ಕರ್ನಾಟಕ ರಾಜ್ಯ ತಂಡದ ಮಹಿಳಾ ವಿಭಾಗಕ್ಕೆ ಆಯ್ಕೆಯಾಗಿದ್ದಾಳೆ.

ಮಾಹಿತಿ ತಂತ್ರಜ್ಞಾನ ವಿಭಾಗದ 5ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಡಾ. ಉದಯಕುಮಾರ ಹಂಪಣ್ಣವರ, ಉಪ ಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ, ಮಾಹಿತಿ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಡಾ.ರಾಜಶೇಖರ, ದೈಹಿಕ ಶಿಕ್ಷಣ ನಿರ್ದೇಶಕ ಎಸ್.ಎಫ್. ಕೊಡ್ಲಿ, ಕಾಲೇಜಿನ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರೌಢಶಾಲೆ, ಪದವಿಪೂರ್ವ ವಿದ್ಯಾರ್ಥಿಗಳ ರಾಜ್ಯ ಮಟ್ಟದ 'ಯುವ ಸಂಸತ್ ಸ್ಪರ್ಧೆ'

# ಗದಗ ಜಿಲ್ಲಾಡಳಿತ ಭವನದಲ್ಲಿ ಗದ್ದಲ–ಕೋಲಾಹಲ!

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಹಯೋಗದೊಂದಿಗೆ ಶನಿವಾರ ಜರುಗಿದ 2023ನೇ ಸಾಲಿನ ಪ್ರೌಢಶಾಲಾ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳ ರಾಜ್ಯ ಮಟ್ಟದ 'ಯುವ ಸಂಸತ್ ಸ್ಪರ್ಧೆ'ಯಲ್ಲಿ ಬರಗಾಲದಿಂದ ತತ್ತರಿಸಿದ ರೈತರ ಪರಿಹಾರ, ಎತ್ತಿನಹೊಳೆ ಯೋಜನೆ ವಿಳಂಬ, ರಸ್ತೆಗಳ ದುರಸ್ತಿ ಹಾಗೂ ಶ್ರೀಗಂಧದ ಮರಗಳ್ಳತನ ಕುರಿತು ವ್ಯಾಪಕ ಚರ್ಚೆ ಹಾಗೂ ಗದ್ದಲ–ಕೋಲಾಹಲ ಸೃಷ್ಟಿಯಾಗಿತ್ತು.

ರಾಜ್ಯದ 32 ಜಿಲ್ಲೆಗಳಿಂದ ರಾಜ್ಯ ಮಟ್ಟಕ್ಕೆ ಆಯ್ಕೆಯಾದ 64 ವಿದ್ಯಾರ್ಥಿಗಳು ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಲಾಟರಿ ಎತ್ತುವ ಮೂಲಕ ಆಡಳಿತ ಹಾಗೂ ವಿರೋಧ ಪಕ್ಷದ ನಾಯಕರನ್ನು, ಸಚಿವರನ್ನು, ಸಭಾಪತಿಯನ್ನು ಆಯ್ಕೆ ಮಾಡಲಾಯಿತು. ತದನಂತರ ಸದನದ ಮಾದರಿಯಲ್ಲೇ ಯುವ ಸಂಸತ್ ಸ್ಪರ್ಧೆಯನ್ನು ಆರಂಭಿಸಲಾಯಿತು.

ಸದನ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷರು ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ನಂತರ ಇತ್ತೀಚೆಗೆ ನಿಧನರಾದ ಆರ್. ಧ್ರುವನಾರಾಯಣ, ಡಾ. ಕೆ. ಭುಜಂಗಶೆಟ್ಟಿ, ಮಾಜಿ ಸಚಿವ ಡಿ.ಬಿ. ಚಂದ್ರೇಗೌಡ ಅವರಿಗೆ ಸಂತಾಪ ಸೂಚಿಸಲಾಯಿತು.

ಯುವ ಸಂಸತ್ ಸ್ಪರ್ಧೆಯಲ್ಲಿ ಪ್ರಶ್ನಾವಳಿಯ ಸುತ್ತು ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕರು ಮೈಸೂರಿನಿಂದ ಗದಗ ನಗರಕ್ಕೆ ಬರವುದರೊಳಗಾಗಿ ಸ್ವರ್ಗದ ಬಾಗಿಲಿಗೆ ಹೋಗಿ ಬಂದಂತಾಯಿತು, ಆ ಮಟ್ಟದಲ್ಲಿ ರಸ್ತೆಗಳು ಹದಗೆಟ್ಟಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ. ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತೀರಾ ಎಂದು ಸಾರಿಗೆ ಸಚಿವರನ್ನು ಪ್ರಶ್ನಿಸಿದರು.

ಇದಕ್ಕೆ ಸಾರಿಗೆ ಸಚಿವರು ಪ್ರತಿಕ್ರಿಯಿಸಿ, ಈಗಾಗಲೇ ರಸ್ತೆ ದುರಸ್ತಿ ಕಾರ್ಯ ಆರಂಭವಾಗಿದ್ದು, ಹಂತಹಂತವಾಗಿ ದುರಸ್ತಿ ಕಾರ್ಯಗಳು ನಡೆಯಲಿವೆ. ಕಾಮಗಾರಿಗಳು ಟೆಂಡರ್ ಹಂತದಲ್ಲಿವೆ ಎಂದರು. ಮರು ಪ್ರಶ್ನಿಸಿದ ವಿರೋಧ ಪಕ್ಷದ ನಾಯಕರು, ರಾಜ್ಯದಲ್ಲಿ ಅಪಘಾತದ ಸಂಖ್ಯೆ ಹೆಚ್ಚಿದ್ದು ಪ್ರತಿನಿತ್ಯ 1,000–1,500 ಗಾಯಾಳುಗಳು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು ಎಂದು ಕುಟುಕಿದರು. ಪ್ರತಿಯಾಗಿ, ರಾಜ್ಯದ ಹೆದ್ದಾರಿ ಹಾಗೂ ಗ್ರಾಮಗಳ ರಸ್ತೆಗಳ ದುರಸ್ತಿ ಹಾಗೂ ಹೊಸ ಕಾಮಗಾರಿಗೆ ಒತ್ತು ನೀಡಲಾಗಿದೆ. ಅಪಘಾತ ತಡೆಯಲು ಯೋಜನೆ ರೂಪಿಸಲಾಗಿದೆ ಎಂದುತ್ತರಿಸಿದರು.



ನಮ್ಮ ಸರಕಾರದ ಅವಧಿಯಲ್ಲಿ 10 ಸಾವಿರ ಹೆಕ್ಟೇರ್‌ನಲ್ಲಿ ಗಿಡ–ಮರಗಳನ್ನು ಬೆಳೆಸಲು ಯೋಜನೆ ರೂಪಿಸಲಾಗಿತ್ತು. ಪ್ರತಿ ರೈತರಿಗೆ 8 ಸಾವಿರ ರೂ. ಸಹಾಯ ಧನ ನೀಡಲಾಗಿತ್ತು. ಆದರೆ, ಕಳೆದ ಒಂದು ತಿಂಗಳೊಳಗಾಗಿ ಬೆಳಗಾವಿ ಭಾಗದಲ್ಲಿ 500ಕ್ಕೂ ಹೆಚ್ಚು ಶ್ರೀಗಂಧ ಮರಗಳನ್ನು ಕಡಿದುಹಾಕಲಾಗಿದೆ. ಶ್ರೀಗಂಧದ ಮರಗಳನ್ನು ಉಳಿಸಲು ಸರಕಾರ ಯಾವ ಕ್ರಮ ಕೈಗೊಂಡಿದೆ ಎಂದು ವಿರೋಧ ಪಕ್ಷದ ಸದಸ್ಯರು ಪರಿಸರ ಸಚಿವರನ್ನು ಪ್ರಶ್ನಿಸಿದರು.

ಗಂಧದ ಮರಗಳನ್ನು ಕಡಿದ ಹಾಗೂ ಕಳ್ಳಸಾಗಾಣಿಕೆ ಮಾಡಿದ ಆರೋಪಿಗಳಿಗೆ ಈಗಾಗಲೇ ಶಿಕ್ಷೆಗೊಳಪಡಿಸಲಾಗಿದೆ. ಶ್ರೀಗಂಧದ ಮರಗಳಿಗೆ ತಂತ್ರಜ್ಞಾನ ಬಳಸಿಕೊಂಡು ಚಿಪ್‌ಗಳನ್ನು ಅಳವಡಿಸುವ ಯೋಜನೆ ರೂಪಿಸಲಾಗುವುದು. ಇದರಿಂದ ಕಳ್ಳತನವಾದ ಗಿಡಗಳು ಎಲ್ಲೇ ಹೋದರೂ ಪತ್ತೆಯಾಗುತ್ತವೆ ಎಂದು ಉತ್ತರಿಸಿದರು.

ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿದ್ದು, ಬರಪೀಡಿತರಿಗೆ ಸರಕಾರ ಇದುವರೆಗೂ ಬರ ಪರಿಹಾರ ನೀಡಿಲ್ಲ. ಕೇಳಿದರೆ ಕೇಂದ್ರ ಸರಕಾರವನ್ನು ದೂರುತ್ತಿರುವುದು ಸರಿಯಲ್ಲ ಎಂದು ವಿರೋಧ ಪಕ್ಷದ ಸದಸ್ಯರು ಆಡಳಿತ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ರೈತರಿಗೆ ಉಚಿತವಾಗಿ ಕೊಳವೆ ಬಾವಿ ಕೊರೆಸಿಕೊಟ್ಟಿದ್ದೇವೆ. ನೀರಾವರಿ ಯೋಜನೆಗಳಿಗೆ ಪ್ರಾತಿನಿಧ್ಯ ನೀಡಿದ್ದೇವೆ. ಮೋಡ ಬಿತ್ತನೆಗೆ ಕ್ರಮ ಕೈಗೊಂಡಿದ್ದೇವೆ. ಅಲ್ಲದೇ, ಬರಪರಿಹಾರಕ್ಕೂ ಪ್ರಯತ್ನಿಸಲಾಗುತ್ತಿದೆ ಎಂದು ಕೃಷಿ ಸಚಿವರು ಉತ್ತರಿಸಿದರು.

ಹೀಗೆ ಹತ್ತು ಹಲವು ವಿಷಯಗಳ ಕುರಿತು ಯುವ ಸಂಸತ್ ಸ್ಪರ್ಧೆ ಮುಂದುವರಿಯಿತು. ಇದೇ ತರಹ ಪದವಿಪೂರ್ವ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಯುವ ಸಂಸತ್ ಸಹ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿತು.

ಎತ್ತಿನ ಹೊಳೆ ಯೋಜನೆ 2017ಕ್ಕೆ ಶಂಕುಸ್ಥಾಪನೆಯಾಗಿ, 12 ಸಾವಿರ ಕೋಟಿ ರೂ. ಮೀಸಲಿಟ್ಟರೂ, ಈವರೆಗೂ ಯೋಜನೆ ಪೂರ್ಣಗೊಂಡಿಲ್ಲ ಎಂದು ವಿರೋಧ ಪಕ್ಷದ ನಾಯಕರು ಪ್ರಶ್ನಿಸಿದಾಗ, ಮುಖ್ಯಮಂತ್ರಿಗಳು ಪ್ರತಿಕ್ರಿಯಿಸಿ, ಈ ಯೋಜನೆಯನ್ನು ನಾವು ಆರಂಭಿಸಿದ್ದಲ್ಲ, ಕಳೆದ 6 ವರ್ಷಗಳ ಹಿಂದೆ ಕಾಮಗಾರಿ ಆರಂಭಿಸಲಾಗಿತ್ತು. ಈಗಷ್ಟೇ ಸರಕಾರ ಅಧಿಕಾರಕ್ಕೆ ಬಂದಿದ್ದು, ಭೀಕರ ಬರಗಾಲ ಆವರಿಸಿದ್ದರಿಂದ ಯೋಜನೆ ಕಡೆಗೆ ಗಮನ ಹರಿಸಲು ಸಾಧ್ಯವಾಗಿಲ್ಲ. ಈ ಬಗ್ಗೆ ಶೀಘ್ರದಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ಉತ್ತರಿಸಿದರು.

## ನಮ್ಮ ಸಮಾಜ ಪರಿವರ್ತನೆ ಹೊಂದಬೇಕಿದೆ

▶▶ಮೊದಲನೇ ಪುಟದಿಂದ

ಇಂದು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲರೂ ಕಾನೂನಿನ ಬಗ್ಗೆ ಜಾಗೃತಿ ಹೊಂದಬೇಕು ಎಂದರು.

ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಮಾತನಾಡಿ, ಮಾನವನ ಇತಿಹಾಸದಲ್ಲಿ ಸತತವಾಗಿ ವರ್ಗ ಸಂಘರ್ಷ ನಡೆಯುತ್ತಲೇ ಬಂದಿದೆ. ಆದರೆ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಅವಕಾಶ ನೀಡಿ, ಸಮಾನವಾಗಿ ಕಂಡಿರುವುದೂ ನಮ್ಮ ಇತಿಹಾಸದಲ್ಲಿದೆ ಎಂದ ಅವರು, ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಹಿಳೆಯರು ಕಾನೂನು ಅರಿವು ಹೊಂದಿ ಇತರರಿಗೂ ತಿಳಿಸಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ರಾಧಾ ಮಣ್ಣೂರ ಮಾತನಾಡಿ, ನಾವು ಕಾನೂನಿನ ಅರಿವು ಹೊಂದಿದಾಗ ನಮ್ಮಿಂದ ಇತರರಿಗೂ ಸಹಕಾರಿಯಾಗುತ್ತದೆ ಎಂದರಲ್ಲದೆ, ತಮ್ಮ ಇಲಾಖೆಯಲ್ಲಿ ಸಿಗುವ ಸಖಿ ಒನ್ ಸ್ಟಾಫ್ ಸೆಂಟರ್ ಸೌಲಭ್ಯಗಳ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಥಳೀಯ ದೂರು ನಿರ್ವಹಣಾ ಸಮಿತಿ ಸದಸ್ಯರು ಹಾಗೂ ವಕೀಲರಾದ ಸುಪರ್ಣಾ ಆರ್ ಬ್ಯಾಹಟ್ಟಿ, ಸಿಡಿಪಿಒ ಎಚ್.ಎಸ್. ಜೋಗೇರ ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಸಿಬ್ಬಂದಿಗಳು, ಗದಗ ಶಹರ, ಗದಗ ಗ್ರಾಮೀಣ, ಮುಂಡರಗಿ ವಲಯದ ಶಿಕ್ಷಕಿಯರು ಹಾಗೂ ನ್ಯಾಯಾಂಗ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು. ಮಹಿಳಾ ಸಂರಕ್ಷಣಾಧಿಕಾರಿ ರಾಜೇಶ್ವರಿ ಮೇಟಿ ಸ್ವಾಗತಿಸಿದರು. ಮೇಲ್ವಿಚಾರಕಿ ವಿಜಯಲಕ್ಷ್ಮಿ ಹಿರೇಮಠ ನಿರೂಪಿಸಿದರು.

## ಯುವ ಸಂಸತ್‌ನಿಂದ ನಾಯಕತ್ವ ಗುಣ ವೃದ್ಧಿ

▶▶ಮೊದಲನೇ ಪುಟದಿಂದ

ಕಾರ್ಯಕ್ರಮದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಜಿ. ಶ್ರೀಧರ್, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ (ಆಡಳಿತ) ಹಾಗೂ ಜಿ.ಎಲ್. ಬಾರಾಟಕ್ಕೆ (ಅಭಿವೃದ್ಧಿ), ಡಿಡಿಪಿಯು ಕೃಷ್ಣಪ್ಪ ಪಿ, ರವೀಂದ್ರನಾಥ ದೊಡ್ಡಮೇಟಿ, ಎನ್.ಆರ್. ಗೌಡರ, ವಿ.ಎಸ್. ದೊತ್ರದ್, ವೈ.ಸಿ. ಪಾಟೀಲ, ಕೊಟ್ರೇಶ್ ವಿಭೂತಿ, ನೊಡಲ್ ಅಧಿಕಾರಿ ಪ್ರಭಾಕರ ಇದ್ದರು.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳ ಅಭಿಮತ

# ಕನ್ನಡ ಭಾಷೆ ಅನ್ನದ ಭಾಷೆಯಾಗಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ ನಾಮಕರಣ ಮಾಡಿದ ಸಂದರ್ಭದಲ್ಲಿ 50 ವರ್ಷಗಳ ಹಿಂದೆ ಚೆನ್ನವೀರ ಕಣವಿಯವರು 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂದು ಸಾರಿದ್ದಾರೆ. ಕನ್ನಡದಲ್ಲಿಯೇ ಶಿಕ್ಷಣ, ವ್ಯವಹಾರಗಳು ನಡೆಯಬೇಕು. ಕನ್ನಡ ಭಾಷೆ ಅನ್ನದ ಭಾಷೆಯಾಗಬೇಕು ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ತಿಳಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2668ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಚನ್ನವೀರ ಕಣವಿಯವರು ಶ್ರೇಷ್ಠ ರಾಷ್ಟ್ರಕವಿಗಳು. ಅವರು ನಮ್ಮ ಗದಗ ಪರಿಸರದವರೇ. ನಮ್ಮ ಕನ್ನಡ ಉಸಿರಾಗಬೇಕಾದರೆ ನಾವು ಮಾತನಾಡುವ ಎಲ್ಲವೂ ಕನ್ನಡಮಯವಾಗಬೇಕು. ಜಾನಪದ ಸಾಹಿತ್ಯ ಅತ್ಯಂತ ಶಕ್ತಿಶಾಲಿಯಾಗಿರುವ ಸಾಹಿತ್ಯವಾಗಿದೆ ಎಂದರು.

ಜಾನಪದ ವಿದ್ವಾಂಸರಾದ ಡಾ. ಶಂಭು ಬಳಿಗಾರ ಮಾತನಾಡಿ,



ಕರ್ನಾಟಕ ಏಕೀಕರಣದಲ್ಲಿ ಬಹಳಷ್ಟು ಜನರ ತ್ಯಾಗವಿದೆ. ಡಿ. ದೇವರಾಜ ಅರಸರು ಕರ್ನಾಟಕ ಎಂದು ಹೆಸರಿಡಲು ವಿರೋಧ ಮಾಡಿದ್ದರು. ಮುಂದೆ ಅದೇ ಅರಸರು ಕರ್ನಾಟಕ ಎಂದು ಪುನರ್ ನಾಮಕರಣ ಮಾಡಿದರು. ಕನ್ನಡಿಗರು ಮಹಾಸ್ವಾಭಿಮಾನಿಗಳು. ಸ್ವಾಭಿಮಾನಕ್ಕೆ ಪೆಟ್ಟು ಬಿದ್ದ ಕಾರಣಕ್ಕೆ ಕನ್ನಡದ ಪ್ರಪ್ರಥಮ ಸಾಮ್ರಾಜ್ಯ ಸ್ಥಾಪನೆಯಾಯಿತು. ಮಯೂರವರ್ಮ ಕಾಂಚೀ ಪಲ್ಲವರನ್ನು ಸೋಲಿಸಿ ಪ್ರಪ್ರಥಮ ಕನ್ನಡದ ಕಂದಬ ಸಾಮ್ರಾಜ್ಯವನ್ನು ಸ್ಥಾಪಿಸಿದನು ಎಂದರಲ್ಲದೆ, ಜಾನಪದ ಸಾಹಿತ್ಯದಲ್ಲಿರುವ ಮಾನವೀಯ ಮೌಲ್ಯಗಳ ಕುರಿತು ಶಿವಾನುಭದಲ್ಲಿ ವಿವರಿಸಿದರು.

> ಜಾನಪದ ಸಾಹಿತ್ಯ ವಿಶ್ವವಿದ್ಯಾಲಯದಲ್ಲಿ ಓದಿದ ಯಾವುದೇ ಪಂಡಿತರು ಬರೆದಿರುವ ಸಾಹಿತ್ಯವಲ್ಲ. ಓದು ಬರಹ ಬಾರದಿರುವ ಅನಕ್ಷರಸ್ಥ ಕನ್ನಡಿಗರು ರಚನೆ ಮಾಡಿರುವ ಸಾಹಿತ್ಯ. ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಬಹಳ ಪ್ರಾಚೀನ ಕಾಲದಿಂದಲೂ ಮುನ್ನಡೆಸಿಕೊಂಡು ಬಂದಿದ್ದಾರೆ. ಜನರಿಗೆ ಆನಂದ, ನೀತಿಬೋಧೆ ಮತ್ತು ಸನ್ಮಾರ್ಗದಲ್ಲಿ ಮುನ್ನಡೆಸುವ ಸಾಹಿತ್ಯವೇ ಜಾನಪದ ಸಾಹಿತ್ಯವಾಗಿದೆ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ಅಭಿಪ್ರಾಯಪಟ್ಟರು.

ಹೆಸರಾಂತ ಮಕ್ಕಳ ಸಾಹಿತಿ ಫ.ಗು. ಸಿದ್ಧಾಪೂರ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಶಂಭು ಬಳಿಗಾರ, ಫ.ಗು. ಸಿದ್ಧಾಪೂರ ಅವರನ್ನು ಪೂಜ್ಯರು ಸಂಮಾನಿಸಿದರು.

ಜ.ತೋಂಟದಾರ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಗೀತಗಾಯನ ಹಾಗೂ ನೃತ್ಯ ನಡೆಯಿತು. ಮೃತ್ಯುಂಜಯ ಹಿರೇಮಠ, ಗುರುನಾಥ ಸುತಾರ ಸಂಗಡಿಗರು ವಚನಸಂಗೀತ ಹಾಡಿದರು. ಸಾನ್ವಿ ಆರ್.ಪಾಟೀಲ ಧರ್ಮಗ್ರಂಥ ಪಠಣಗೈದರು. ಶ್ರದ್ಧಾ ಎಸ್.ಹೂಲಿ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ಬಸಪ್ಪ ಅಮೃತಪ್ಪ ಪಲ್ಲೇದ ಅವರನ್ನು ಶ್ರೀಗಳು ಸಂಮಾನಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

# ಜೀರ್ಣೋದ್ಧಾರ ಕಾರ್ಯಕ್ಕೆ ಚಾಲನೆ



■ವಿಜಯಸಾಕ್ಷಿ ಸುದ್ದಿ, ಗದಗ

ಬಸವೇಶ್ವರ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಜೀರ್ಣೋದ್ಧಾರ, ವೀರಭದ್ರ ದೇವರ ಹಾಗೂ ಭದ್ರಕಾಳಿ ದೇವಿಯ ನೂತನ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದ ಪ್ರಯುಕ್ತ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಭೂಮಿಪೂಜಾ ಸಮಾರಂಭ ನೆರವೇರಿತು.

ದೇವಸ್ಥಾನದ ಧರ್ಮದರ್ಶಿ ರಾಚಪ್ಪ ಮಿಣಜಗಿ ಮಾತನಾಡಿ, ಎಲ್ಲರೂ ಈ ಕಾರ್ಯಕ್ಕೆ ತನು-ಮನ-ಧನ ಸಹಾಯ ನೀಡಿ, ಜೀರ್ಣೋದ್ಧಾರ ಕಾರ್ಯವನ್ನು ಶೀಘ್ರವೇ ಪೂರೈಸೋಣ ಎಂದು ವಿಂತಿಸಿದರು. ಭೂಮಿ ಪೂಜಾ ಕೈಂಕರ್ಯಗಳನ್ನು ಗಂಗಾಧರ ಹಿರೇಮಠ, ಸಿದ್ದು ಗಣಾಚಾರಿ ಮತ್ತು ವಿರೇಶ ಗಣಾಚಾರಿ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಧರ್ಮದರ್ಶಿಗಳಾದ ಶಿವಪುತ್ರಪ್ಪ ಬೇವಿನಮರದ, ಶಿವಬಸಪ್ಪ ಯಂಡಿಗೇರಿ, ಪ್ರದೀಪ ಕೊಡೆಕಲ್ಲ್, ನಗರಸಭಾ ಸದಸ್ಯ ಚಂದ್ರಶೇಖರ ಬಸಪ್ಪ ತಡಸದ, ಹಿರಿಯರಾದ ಗುರುಲಿಂಗಪ್ಪ ಕಾಡಪಪ್ಪನವರ, ಬಸವರಾಜ ಚನ್ನಪ್ಪ ಕಾಡಪಪ್ಪನವರ, ಶಿವಪುತ್ರಪ್ಪ ಕಿನ್ನಾಳ, ಶಂಕರ ಕಾರಕಟ್ಟಿ, ದಾನೇಶ ತಡಸದ, ವಿಶ್ವನಾಥ ಶೀರಿ, ಸಾವಿತ್ರಿ ಬೇವಿನಮರದ, ಓಣಿಯ ಯುವಕರು, ಮಹಿಳೆಯರು ಉಪಸ್ಥಿತರಿದ್ದರು.

### ಬರ ನಿರ್ವಹಣಾ ಸಮಿತಿ ವತಿಯಿಂದ ಜರುಗಿದ ಸಭೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ

# ಅಸಡ್ಡೆ ತೋರಿದ ಗುತ್ತಿಗೆದಾರರ ಮೇಲೆ ಕೇಸ್ ದಾಖಲಿಸಿ




■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ 37 ಗ್ರಾಮಗಳ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆ, ಜೆಜೆಎಂ ಹಾಗೂ ಡಿಬಿಒಟಿ ಯೋಜನೆಯಡಿ ಕುಡಿಯುವ ನೀರಿನ ಯೋಜನೆಗಳಲ್ಲಿ ಅಸಡ್ಡೆ ತೋರಿದ ಗುತ್ತಿಗೆದಾರರ ಮೇಲೆ ಪ್ರಕರಣ ದಾಖಲಿಸುವಂತೆ ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಶನಿವಾರ ತಹಸೀಲ್ದಾರ ಕಚೇರಿಯಲ್ಲಿ ಬರ ನಿರ್ವಹಣಾ ಸಮಿತಿ ವತಿಯಿಂದ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಪ್ರಾರಂಭವಾದಾಗಿನಿಂದಲೂ ಸಮರ್ಪಕವಾಗಿ ನೀರು ಪೂರೈಕೆ ಯಾಗುತ್ತಿಲ್ಲ. ಡಿಬಿಒಟಿಯಿಂದ ಚವಡಾಳ ಹಾಗೂ ಹೆಬ್ಬಾಳ ಗ್ರಾಮಕ್ಕೆ ನೀರು ಪೂರೈಕೆಯಾಗುತ್ತಿಲ್ಲ. ಜೆಜೆಎಂ ಯೋಜನೆಯಡಿಯಲ್ಲಿಯೂ ಕೆಲಸ ಪೂರ್ಣಗೊಂಡಿಲ್ಲ. ಈ ಬಗ್ಗೆ ಅಧಿಕಾರಿಗಳು ಕೂಡಾ ಪರಿಶೀಲನೆ ನಡೆಸಿದ್ದಾರೆ ಎಂದು ಆರ್‌ಡಬ್ಲ್ಯುಎಸ್ ಇಂಜಿನಿಯರರನ್ನು ತರಾಟೆಗೆ ತೆಗೆದುಕೊಂಡರು.

> ಜನೇವರಿ ತಿಂಗಳಲ್ಲಿ ನೀರಿನ ಅಭಾವ ಬರುವ ಸಾಧ್ಯತೆ ಇರುವುದರಿಂದ ಇದನ್ನು ಸಮರ್ಥವಾಗಿ ಎದುರಿಸಲು ಈಗಾಗಲೇ ಮತಕ್ಷೇತ್ರದಾದ್ಯಂತ ಅಧಿಕಾರಿಗಳ ಜೊತೆಗೆ ಚರ್ಚೆ ನಡೆಸಿ, ಅಗತ್ಯ ಮುಂಜಾಗ್ರತಾ ಕ್ರಮ ವಹಿಸಲಾಗುತ್ತಿದೆ. ನೀರಿನ ತೊಂದರೆಯಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜಿಗೆ ಸಧ್ಯದಲ್ಲಿಯೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಅವಶ್ಯವಿದ್ದಲ್ಲಿ ಗೋಶಾಲೆಯನ್ನು ತೆರೆಯಲಾಗುವುದು. ರೈತರಿಗೆ ಬರ ಪರಿಹಾರ ನೀಡುವಂತೆ ಸರಕಾರಕ್ಕೆ ಒತ್ತಾಯಿಸಲಾಗುವುದು ಎಂದು ಶಾಸಕ ಡಾ.ಲಮಾಣಿ ತಿಳಿಸಿದರು.

ಅಸಮರ್ಪಕ ಕೆಲಸ ನಿರ್ವಹಿಸಿದವರ ಮೇಲೆ ಲೋಕಾಯುಕ್ತ ಬಳಿ ಸೋ-ಮೋಟಿವ್ ಪ್ರಕರಣ ದಾಖಲಿಸಿ ಬರುವ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸುತ್ತೇನೆ. ಇಂತಹ ಕೆಲಸ ಮಾಡಿದ ಎಲ್ಲ ಗುತ್ತಿಗೆದಾರರ ಸಂಪೂರ್ಣ ವಿವರ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ತಹಸೀಲ್ದಾರ ಅನಿಲ ಬಡಿಗೇರ ಮಾತನಾಡಿ, ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮಗಳನ್ನು ಗುರುತಿಸುವುದಕ್ಕಾಗಿ ಮೊಬೈಲ್ ಆ್ಯಪ್ ಆಧಾರಿತ ವಾಟರ್ ಟ್ಯಾಂಕ್ ಮ್ಯಾನೇಜ್‌ಮೆಂಟ್‌ನ ಜಿಪಿಎಸ್ ಆ್ಯಪ್ ಮೂಲಕ ಆಯಾ ಗ್ರಾ.ಪಂ ವತಿಯಿಂದ ನಮಗೆ ದೃಢೀಕರಣ ನೀಡಬೇಕು. ಅಲ್ಲಿಯ ನೈಜ ಸ್ಥಿತಿಯನ್ನು ಅರಿತು ಶಾಸಕರ ನಿರ್ದೇಶನದಂತೆ ತಾಲೂಕಾ ಮಟ್ಟದಲ್ಲಿ ಇದಕ್ಕೆ ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದರು.

ತಾ.ಪಂ ಇಓ ಡಾ. ಎನ್.ಎಚ್. ಓಲೇಕಾರ, ಎಡಿಎಚ್ ಸುರೇಶ ಕುಂಬಾರ, ಎಡಿಎ ರೇವಣೆಪ್ಪ ಮನಗೂಳಿ, ಪಿಡಬ್ಲ್ಯುಡಿ ಎಇಇ ತಿಮ್ಮಾಪೂರ, ಆರ್‌ಡಬ್ಲ್ಯುಎಸ್ ಎಇ ಸಂತೋಷ ಲಮಾಣಿ, ಎಸ್.ಎಸ್. ಅಸ್ಕಿ, ಎಸ್.ಎಸ್. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಸಂವಿಧಾನ ನ್ಯಾಯಯುತ ಜೀವನದ ಅಗತ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಪ್ರಜೆಗಳೆಲ್ಲರೂ ರಾಮಾಯಣ, ಮಹಾಭಾರತಗಳಂತೆ ಭಾರತದ ಸಂವಿಧಾನದ ಮಹತ್ವವನ್ನು ಅರಿಯಬೇಕೆಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ ಕರೆ ನೀಡಿದರು.

ಅವರು ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಕಾನೂನು ಮಹಾವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ 'ಸಂವಿಧಾನ ದಿನ ಆಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ರಾಮಾಯಣ ಮತ್ತು ಮಹಾಭಾರದಂತೆ ಸಂವಿಧಾನವು ನಮ್ಮ ಸುಂದರ ಬದುಕಿಗೆ, ನ್ಯಾಯಯುತ ಜೀವನದ ಹೆಜ್ಜೆಗೆ ಅಗತ್ಯವಾಗಿದೆ. ಸಂವಿಧಾನ ನೀಡಿರುವ ಹಕ್ಕು



ಮತ್ತು ಕರ್ತವ್ಯಗಳನ್ನು ಸಮರ್ಪಕವಾಗಿ ತಿಳಿದುಕೊಂಡು ನಡೆದರೆ ಸಾಧನೆಯ ಸಾರ್ಥಕ ಜೀವನ ಸಾಗಿಸಬಹುದು ಎಂದರು.

ಕಾನೂನು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು, ವಿದ್ಯಾರ್ಥಿಗಳು ಕಾನೂನು ಕಲಿತರೆ ಸಾಲದು ಅದನ್ನು ಅನುಸರಿಸಬೇಕು, ಜಾಗೃತಿ ಮೂಡಿಸಬೇಕೆಂದರು. ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ಸಂವಿಧಾನವೇ ನಮ್ಮ ಬದುಕಿಗೆ ಶಕ್ತಿಯೆಂದರು.

ಅಧ್ಯಕ್ಷತೆಯನ್ನು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರವಿ ಮೂಲಿಮನಿ ವಹಿಸಿ ಮಾತನಾಡಿ, ಕಾನೂನು ವಿದ್ಯಾರ್ಥಿಗಳು ಸಂವಿಧಾನದ ಬಗೆಗೆ ವಿಶೇಷ ಗೌರವವನ್ನು ಹೊಂದಬೇಕೆಂದರು. ಸಂಸ್ಥೆಯ ಉಪಾಧ್ಯಕ್ಷ, ನ್ಯಾಯವಾದಿ ಎಸ್.ಕೆ. ನದಾಫ, ಪ್ರಾಚಾರ್ಯರಾದ ಪಲ್ಲವಿ ಬುಯ್ಯಾರ ವೇದಿಕೆಯಲ್ಲಿದ್ದರು. ಉಪನ್ಯಾಸಕರಾದ ಎಸ್.ಜಿ. ಅಣ್ಣಿಗೇರಿ, ಡಿ.ಎಲ್. ಕುಲಕರ್ಣಿ, ಮಹಾಂತೇಶ ಕೊರಡಗೇರಿ, ವಿಶ್ವನಾಥ ಹಿರೇಮಠ, ಗುರುರಾಜ ಗೌರಿ, ಎಂ.ವ್ಹಿ. ಹಿರೇಮಠ, ಸಂಗೀತಾ ಪಾಟೀಲ, ನಜೀಮಾ ಮುಲ್ಲಾ, ಬಸಮ್ಮ, ನೀತಾ ಮಲ್ಲಿಕಾರ್ಜುನ ಭಾಗವಹಿಸಿದ್ದರು. ಸ್ಫೂರ್ತಿ ಕುಡ್ಲೂರ ನಿರೂಪಿಸಿದರು. ಬೆಟ್ಟೇಶ ಸಂಗಟಿ ವಂದಿಸಿದರು.

# ರಿವಾರ್ಡ್ ಯೋಜನೆಯಡಿ ಉಚಿತ ಜಾನುವಾರು ಶಿಬಿರ

■ವಿಜಯಸಾಕ್ಷಿ ಸುದ್ದಿ, ಗದಗ

ಜಾನುವಾರುಗಳ ಸಂಖ್ಯೆಯನ್ನು ಸುಸ್ಥಿತಿಯಲ್ಲಿಡಲು ಹಾಗೂ ಅವುಗಳ ಆರೋಗ್ಯ ರಕ್ಷಣೆಗಾಗಿ ಶಿಬಿರಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವಾಗಿದೆ. ಜಲಾನಯನ ಅಭಿವೃದ್ಧಿ ಯೋಜನೆಯ ಜೊತೆಗೆ ಜಾನುವಾರುಗಳ ಆರೋಗ್ಯ ರಕ್ಷಣೆ ಕಾರ್ಯ ಹಮ್ಮಿಕೊಂಡಿದ್ದು ರೈತರಿಗೆ ವರದಾನವಾಗಿದೆ ಎಂದು ಡಾ. ಎಸ್.ಎಸ್. ಹೊಸಮಠ ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಜಿಲ್ಲೆಯ ಕಣವಿ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ ರಿವಾರ್ಡ್ ಯೋಜನೆಯ ಪ್ರವೇಶ ದ್ವಾರ ಚಟುವಟಿಕೆಯಡಿ ಹಮ್ಮಿಕೊಂಡಿದ್ದ ಉಚಿತ ಜಾನುವಾರು ಆರೋಗ್ಯ




ಶಿಬಿರದಲ್ಲಿ ಮಾತನಾಡಿದರು.

ತಾ.ಪಂ ಮಾಜಿ ಅಧ್ಯಕ್ಷ ಶರಣಪ್ಪಗೌಡ ಪಾಟೀಲ ಮಾತನಾಡಿ, ಜಾನುವಾರುಗಳು ರೈತರ ಜೀವನಾಡಿ. ಅವುಗಳ ಆರೋಗ್ಯ ಕಾಪಾಡಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂದು ಹೇಳಿದರು.

ಕೃಷ್ಣಪ್ಪಾ ನಾಗಲೋಟಿ ಮಾತನಾಡಿ, ಕೃಷಿ ಇಲಾಖೆ ರೈತರಿಗೆ ಅತೀ ಸಾಮೀಪ್ಯವಿರುವ ಇಲಾಖೆಯಾಗಿದೆ. ರೈತರ ಕೆಲಸಗಳೊಂದಿಗೆ ಇಲಾಖೆಯು ಜಾನುವಾರುಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದು ಶ್ಲಾಘನೀಯ ಕೆಲಸ ಎಂದರು.

ಕೃಷಿ ಅಧಿಕಾರಿ ಎಫ್.ಸಿ. ಗುರಿಕಾರ ರಿವಾರ್ಡ್ ಯೋಜನೆಯ ಕುರಿತು ವಿವರವಾಗಿ ಮಾತನಾಡಿದರು. ಗ್ರಾ.ಪಂ ಸದಸ್ಯರಾದ ಪ್ರಕಾಶ್ ಕುರ್ತಕೋಟಿ, ಪಾರ್ವತೆಮ್ಮ ಕುರ್ತಕೋಟಿ, ಯಲ್ಲಪ್ಪ ಕೋರಿ, ಗಂಗಪ್ಪ ಗಡಾದ, ಪಶು ಸಂಗೋಪನಾ ಇಲಾಖೆ ಅಧಿಕಾರಿಗಳು, ರಿವಾರ್ಡ್ ಯೋಜನೆಯ ಸಿಬ್ಬಂದಿಗಳು ಹಾಜರಿದ್ದರು.

ಜಾನವಾರುಗಳ ಆರೋಗ್ಯ ತಪಾಸಣೆ ನಡೆಸಿ, ಜಾನುವಾರು ಸಾಕಾಣಿಕೆ ಕುರಿತು ಮಾಹಿತಿ ಪುಸ್ತಕವನ್ನು ರೈತರಿಗೆ ವಿತರಿಸಲಾಯಿತು.

ಶಬನಮ್ ಬಾನು ಸ್ವಾಗತಿಸಿದರು. ದ್ರಾಕ್ಷಾಯಿಣಿ ಕುರ್ತಕೋಟಿ ನಿರೂಪಿಸಿದರು. ಪಲ್ಲವಿ ಪೂಜಾರ ವಂದಿಸಿದರು.


## ನಮ್ಮೂರಿಗೂ ಬರಲಿದೆ 'ಡ್ರಾಮಾ' ನಾಟಕ ಮಂಡಳಿ!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸಣ್ಣ ಹಳ್ಳಿಯಿಂದ ಹಿಡಿದು ವಿಶ್ವದ ಮೂಲೆಮೂಲೆಯ ತನಕ ಎಲ್ಲರ ಮನರಂಜಿಸುವ ಮಾಧ್ಯಮಗಳಲ್ಲಿ ನಾಟಕವೂ ಒಂದು. ಇಂತಹ ಮಾಧ್ಯಮದ ಮೂಲಕ ಕರುನಾಡನ್ನು ರಂಜಿಸುತ್ತಿರುವ 'ಝೀ ಕನ್ನಡ ವಾಹಿನಿ'ಯ ರಿಯಾಲಿಟಿ ಶೋ 'ಡ್ರಾಮಾ ಜೂನಿಯರ್ಸ್' ತನ್ನ 5ನೇ ಆವೃತ್ತಿಯನ್ನು ಪ್ರಾರಂಭಿಸುತ್ತಿದೆ.

ನಾಡಿನ 31 ಜಿಲ್ಲೆಗಳಲ್ಲಿ ಸುಮಾರು ಒಂದು ತಿಂಗಳುಗಳ ಕಾಲ 30 ಸಾವಿರಕ್ಕೂ ಹೆಚ್ಚು ಮಕ್ಕಳ ಆಡಿಷನ್ ನಡೆಸಿ, ಅದರಲ್ಲಿ 35 ಪ್ರತಿಭೆಗಳನ್ನು ವೇದಿಕೆಗೆ ಕರೆತಂದಿದೆ. ಈಗಾಗಲೇ ಮೊದಲ ವಾರದ ಸಂಚಿಕೆಯಲ್ಲಿ ಹಲವು ಮಕ್ಕಳು ತ್ರಿವಳಿ ರತ್ನಗಳ ಮನಸ್ಸನ್ನು ಗೆದ್ದು ಡ್ರಾಮಾ ವೇದಿಕೆಗೆ ಅಧಿಕೃತವಾಗಿ ಕಾಲಿಟ್ಟಿದ್ದಾರೆ.

ನಾಟಕ ಎಂಬ ಸುಂದರ ಕಲೆಯನ್ನು ಕರುನಾಡಿನ ಮೂಲೆ




ಮೂಲೆಗೆ ಪಸರಿಸುವ ಮಹತ್ತರ ಉದ್ದೇಶದೊಂದಿಗೆ 'ಡ್ರಾಮಾ' ನಾಟಕ ಮಂಡಳಿ ಎಂಬ ವೇದಿಕೆಯನ್ನು ಹೊತ್ತಿರುವ ವಾಹನ ಕರ್ನಾಟಕದ 31 ಜಿಲ್ಲೆಗಳಲ್ಲಿ ತಿರುಗಾಟ ನಡೆಸಿ, ಮತ್ತೊಂದು ಕಿರುವೇದಿಕೆಯನ್ನು ಕರುನಾಡಿನ ಪ್ರತಿಭೆಗಳಿಗೆ ನೀಡಲಿದೆ. ನವೆಂಬರ್ 22ರಿಂದ ಬೆಂಗಳೂರಿನಿಂದ ಹೊರಟಿರುವ ಈ ವಾಹನ, ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಗಳನ್ನು ತಲುಪಲಿದೆ.

ಇದೇ ನ.26, ಭಾನುವಾರ ಹುಬ್ಬಳ್ಳಿ, ಧಾರವಾಡ, ಗದಗ ಹಾಗೂ 27ರಂದು ಸೋಮವಾರ ರೋಣ, ಬಾದಾಮಿ, ಬಾಗಲಕೋಟೆ ಮಾರ್ಗದಲ್ಲಿ ಡ್ರಾಮಾ ನಾಟಕ ಮಂಡಳಿಯ ವಾಹನ ಸಂಚರಿಸಲಿದೆ.



■ವಿಜಯಸಾಕ್ಷಿ ಸುದ್ದಿ, ಹಾವೇರಿ

ಜಿಲ್ಲೆಯ ಹಾನಗಲ್ಲ ತಾಲೂಕಿನ ಹನುಮನಕೊಪ್ಪ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿಯ ನೂತನ ದೇವಾಲಯದ ಉದ್ಘಾಟನೆಯನ್ನು ಹಾವೇರಿ- ಗದಗ ಲೋಕಸಭಾ ಮತಕ್ಷೇತ್ರದ ಸೇವಾಕಾಂಕ್ಷಿ ಕೆ.ಇ. ಕಾಂತೇಶ್ ನೆರವೇರಿಸಿದರು. ಸಮಾರಂಭದಲ್ಲಿ ಸಮಾಜದ ಒಳಿತು ಹಾಗೂ ಭಾರತದ ನವ ನಿರ್ಮಾಣಕ್ಕಾಗಿ ಎಲ್ಲರೂ ಸೇರಿ ಮುನ್ನಡೆಯಬೇಕು ಹಾಗೂ ನಾವೆಲ್ಲರೂ ಒಗ್ಗಟ್ಟಿನಿಂದ ಮುಂದೆ ಸಾಗಬೇಕು ಎಂದರು. ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಇಂದಿನಿಂದ ಎನ್‌ಎಸ್‌ಎಸ್ ವಿಶೇಷ ಶಿಬಿರ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಹಾಗೂ ನಗರದ ಕೆಎಲ್‌ಇ ಸಂಸ್ಥೆಯ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನ.26ರಿಂದ ಡಿ.2ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ, ಕಾನೂನು ಅರಿವು-ನೆರವಿಗಾಗಿ ಯುವಜನತೆ ಕಾರ್ಯಕ್ರಮ ಸಮೀಪದ ಹಾತಲಗೇರಿ ಗ್ರಾಮದಲ್ಲಿ ಜರುಗಲಿದೆ.

ನ.26ರಂದು ಸಂಜೆ 5 ಗಂಟೆಗೆ ಸಮಾರಂಭವನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ, ವಕೀಲರು ಮತ್ತು ಸಿಂಡಿಕೇಟ್ ಸದಸ್ಯ ಮಹೋನ್ ಭಜಂತ್ರಿ ಉದ್ಘಾಟಿಸಲಿದ್ದಾರೆ. ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯದ ಕಾರ್ಯಾಧ್ಯಕ್ಷ ಎಸ್.ಎ. ಮಾನ್ವಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯ ಎಸ್.ಎಫ್. ಹಾದಿಮನಿ, ಬಿ.ಜಿ. ಶೆಲ್ಲಿಕೇರಿ ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹಾತಲಗೇರಿ ಗ್ರಾ.ಪಂ ಅಧ್ಯಕ್ಷೆ ಗಂಗವ್ವ ಮಾದರ ಅಧ್ಯಕ್ಷತೆ ವಹಿಸಲಿದ್ದು, ಗ್ರಾ.ಪಂ ಉಪಾಧ್ಯಕ್ಷೆ ನಿರ್ಮಲಾ ಕರಿಗೌಡ್ರ, ಪ್ರಾಚಾರ್ಯ ಡಾ. ಎಸ್. ಆರ್. ಪಾಟೀಲ ಉಪಸ್ಥಿತರಿರುವರು ಎಂದು ಎನ್‌ಎಸ್‌ಎಸ್ ಘಟಕದ ಯೋಜನಾಧಿಕಾರಿ ಡಾ. ಸಿ.ಬಿ. ರಣಗಟ್ಟಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಸದ್ಭಾವನಾ ಪಾದಯಾತ್ರೆ' ನಾಳೆ

■ವಿಜಯಸಾಕ್ಷಿ ಸುದ್ದಿ, ಗದಗ

ನ.27ರ ಬೆಳಿಗ್ಗೆ 6.30ಕ್ಕೆ ಬೆಟಗೇರಿ–ಹುಯಿಲಗೋಳ ರಸ್ತೆಯ ಬಾಲಾಜಿ ಮಂದಿರದಿಂದ ಸದ್ಭಾವನಾ ಪಾದಯಾತ್ರೆಯು ಆರಂಭವಾಗಲಿದ್ದು, ಬ್ಯಾಳಿಯವರ ಓಣಿ, ಗೌರಿ ಗುಡಿ ಓಣಿ, ಮಂಜುನಾಥ ದೇವಸ್ಥಾನ, ರಾಮದೇವರ ಗುಡಿ, ಬೆಲ್ಲದವರ ಮನೆ, ಮೇರವಾಡೆ ಓಣಿ, ಗಾಂಧಿ ಗುಡಿ, ಹೊಸಪೇಟ ಚಕ್ ಮಾರ್ಗವಾಗಿ ಹಳೇ ಬನಶಂಕರಿ ದೇವಸ್ಥಾನದಲ್ಲಿ ಸಮಾರೋಪಗೊಳ್ಳಲಿದೆ.

ಸದ್ಭಾವನಾ ಪಾದಯಾತ್ರೆಯಲ್ಲಿ ಕೊಪ್ಪಳ ಸಂಸ್ಥಾನ ಗವಿಮಠದ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಹೊಸಳ್ಳಿಯ ಸಂಸ್ಥಾನಮಠದ ಅಭಿನವ ಬೂದೀಶ್ವರ ಮಹಾಸ್ವಾಮಿಗಳು, ಚಿಕೇನಕೊಪ್ಪ ಶರಣರ ಮಠದ ಶಿವಶಾಂತವೀರ ಶರಣರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಯುವ ಸಂಸತ್ ಸ್ಪರ್ಧೆಯ ಪ್ರೌಢಶಾಲಾ ವಿಭಾಗದ ಫಲಿತಾಂಶ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸಕ್ತ ಸಾಲಿನ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಪ್ರೌಢಶಾಲಾ ವಿಭಾಗದಲ್ಲಿ ವಿಜೇತ ವಿದ್ಯಾರ್ಥಿಗಳ ವಿವರ ಹೀಗಿದೆ.

ಉಡುಪಿಯ ಸಾಣೂರಿನ ಕಾರ್ತಿಕ ಪ್ರಥಮ, ಶಿವಮೊಗ್ಗದ ಸಾಗರ ತಾಲೂಕಿನ ಸುಭಾಷ ನಗರದ ಜಿಎಚ್‌ಎಸ್‌ನ ಭೂಮಿಕ ಬಿ.ಜಿ. ದ್ವಿತೀಯ, ದಕ್ಷಿಣ ಕನ್ನಡದ ಉಪ್ಪಿನಗದ್ದೆಯ ಜಿಪಿಯುಸಿಯ ಅರ್ಪಿತ ಎ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಉಡುಪಿಯ ಸಾಣೂರಿನ ಜಿಪಿಯುನ ನವ್ಯ 4ನೇ ಸ್ಥಾನ, ಮೈಸೂರಿನ ಜಿ.ಎಚ್.ಎಸ್‌ನ ಅಮೂಲ್ಯ ಎಚ್.ಎಸ್ 5ನೇ ಸ್ಥಾನ, ಚಿಕ್ಕಮಗಳೂರಿನ ಕಡೂರಿನ ಶ್ರೇಯಾ ಟಿ.ಸಿ 6ನೇ ಸ್ಥಾನ, ಕೋಲಾರದ ಜಿ.ಬಿ.ಜೆ.ಸಿ.ಯ ಮಹಮದ್‌ಖಾನ 7ನೇ ಸ್ಥಾನ, ವಿಜಯಪುರದ ಇಂಡಿ ತಾಲೂಕಿನ ಆದರ್ಶ ವಿದ್ಯಾಲಯದ ಸುಶ್ಮಿತಾ ಗದ್ಯಾಳ 8ನೇ ಸ್ಥಾನ, ಶಿವಮೊಗ್ಗದ ಪಿಳ್ಳೂರಿ ಗಿರಿಯ ಪ್ರಜ್ವಲ.ಡಿ 9ನೇ ಸ್ಥಾನ, ಬೆಂಗಳೂರು ದಕ್ಷಿಣದ ಆನೇಕಲ್‌ನ ಹಾರದಗದ್ದೆಯ ಹುಸೇನ.ಬಿ 10ನೇ ಸ್ಥಾನ ಪಡೆದಿದ್ದಾರೆ.

### ಸೂಡಿಯಲ್ಲಿ ನ.28ರಿಂದ ಅತಿರುದ್ರ ಮಹಾಯಾಗ | ಪ್ರ.ಅರ್ಚಕ ಭುಜಂಗಭಟ್ಟ ಜೋಷಿ ಮಾಹಿತಿ


# ಶ್ರೀ ಚಿದಂಬರೇಶ್ವರ ರಥೋತ್ಸವ ಡಿ.3ಕ್ಕೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಲೋಕ ಕಲ್ಯಾಣಕ್ಕಾಗಿ ನ.28ರಿಂದ ಡಿಸೆಂಬರ್ 2ರವರೆಗೆ ಸೂಡಿಯ ಶ್ರೀ ಚಿದಂಬರೇಶ್ವರ ದೇವಸ್ಥಾನದಲ್ಲಿ ಅತಿರುದ್ರ ಮಹಾಯಾಗ ನಡೆಯಲಿದೆ. ಡಿಸೆಂಬರ್ 3ರಂದು ಸ್ವಾಮಿ ಶ್ರೀ ಚಿದಂಬರೇಶ್ವರರ ಜಯಂತ್ಯುತ್ಸವದ ನಿಮಿತ್ತ ರಥೋತ್ಸವ ಜರುಗಲಿದ್ದು, ನರೇಗಲ್ಲ ಮತ್ತು ಸುತ್ತಲಿನ ಗ್ರಾಮಗಳ ಭಕ್ತರು ಅತಿರುದ್ರ ಯಾಗದಲ್ಲಿ ಮತ್ತು ರಥೋತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಶ್ರೀ ಚಿದಂಬರೇಶ್ವರ ದೇವಸ್ಥಾನ ಸೂಡಿಯ ಪ್ರಧಾನ ಅರ್ಚಕ ವೇ.ಬ್ರ. ಭುಜಂಗಶರ್ಮಾ ಜೋಷಿ ಭಕ್ತರಲ್ಲಿ ವಿನಂತಿಸಿದರು.

ಇಲ್ಲಿನ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಸಭೆ ಸೇರಿದ್ದ ಬ್ರಹ್ಮ ಸಮಾಜದ ಭಕ್ತರನ್ನುದ್ದೇಶಿಸಿ ಮಾತನಾಡಿದ ಅವರು, ಈ ಭಾಗದಲ್ಲಿ ಈವರೆಗೆ ಆಗದ ಅತಿರುದ್ರ ಯಾಗ ಸೂಡಿಯಲ್ಲಿ ನಡೆಯುತ್ತಿದೆ. ನಾಡಿನ ಅನೇಕ ಮಠಾಧೀಶರು, ರಾಜಕೀಯ ಧುರೀಣರು, ಧಾರ್ಮಿಕ ಮುಖಂಡರು, ಖ್ಯಾತ ಕಲಾವಿದರು ಈ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಶ್ರೀ ಚಿದಂಬರೇಶ್ವರರ 265ನೇ ಜನ್ಮ





ದಿನೋತ್ಸವವಿದ್ದು, ಸೂಡಿಯಲ್ಲಿ 53ನೇ ಜನ್ಮ ದಿನೋತ್ಸವವನ್ನು ಆಚರಿಸುವ ನಿಮಿತ್ತ ಈ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ನ. 28ರಿಂದ ಪ್ರತಿದಿನ ಬೆಳಿಗ್ಗೆ 5.30ಕ್ಕೆ ಕಾಕಡಾರತಿ, ಅಭಿಷೇಕ, ಅಲಂಕಾರ ಪೂಜೆ, 12.30ಕ್ಕೆ ನೈವೇದ್ಯ, ಆರತಿ, ಮಹಾಪ್ರಸಾದ ಮತ್ತು ಸಂಜೆ 6ಕ್ಕೆ ಪಾಲಕೀ ಸೇವೆ, ಭಜನೆ, ಅಷ್ಟಾವಧಾನ ಕಾರ್ಯಕ್ರಮಗಳು ಉತ್ಸವದ ಕೊನೆಯವರೆಗೂ ಜರುಗಲಿದ್ದು, ಅತಿರುದ್ರ ಮಹಾಯಾಗ ಪ್ರಧಾನಾಚಾರ್ಯರಾಗಿ ಹಾವೇರಿಯ ವಿದ್ವಾನ್ ಶಂಕರಭಟ್ಟ ಜೋಷಿ ಪಾಲ್ಗೊಳ್ಳಲಿದ್ದಾರೆ ಎಂದರು.

ನ.28ರ ಬೆಳಿಗ್ಗೆ 10ಕ್ಕೆ ಅತಿರುದ್ರ ಮಹಾಯಾಗದ ನಿಮಿತ್ತ 150 ವೈದಿಕರಿಂದ ಅತಿರುದ್ರಾಭಿಷೇಕ ಪ್ರಾರಂಭವಾಗುತ್ತದೆ. ನ.29ರ ಬೆಳಿಗ್ಗೆ 7ಕ್ಕೆ ಅತಿರುದ್ರಾಭಿಷೇಕ, 30ರಂದು ಬೆಳಿಗ್ಗೆ 9ಕ್ಕೆ ಗದಗ ಜಿಮ್ಸ್ ವತಿಯಿಂದ ರಕ್ತದಾನ ಶಿಬಿರ, ಡಿಸೆಂಬರ್ 2ರಂದು ಬೆಳಿಗ್ಗೆ 10ಕ್ಕೆ ಹುನಗುಂದದ ಮಹಾಲಕ್ಷ್ಮೀ ಭಜನಾ ಮಂಡಳದವರಿಂದ ಭಜನಾ ಕಾರ್ಯಕ್ರಮ, 11.30ಕ್ಕೆ ಲೋಕಾಪುರದ ಪ.ಪೂ.ಶ್ರೀ ಬ್ರಹ್ಮಾನಂದ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಧರ್ಮ ಸಭೆ, ಶ್ರೀ ಚಿದಂಬರ ಪಂಚಾಂಗ ಬಿಡುಗಡೆ, ಮಧ್ಯಾಹ್ನ 3.30ಕ್ಕೆ ಶ್ರೀ ಮಹಾಗಣಪತಿ ದೇವಸ್ಥಾನದಿಂದ ಶ್ರೀ ಚಿದಂಬರೇಶ್ವರ ದೇವಸ್ಥಾನದವರೆಗೆ ಮಹಾಸ್ವಾಮಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಯಲಿದೆ ಎಂದರು.

ಡಿಸೆಂಬರ್ 3ರಂದು ಬೆಳಿಗ್ಗೆ 10.30ಕ್ಕೆ ಕುರ್ತಕೋಟಿಯ ಶ್ರೀ ದಿಗಂಬರಶಾಸ್ತ್ರಿಗಳಿಂದ ಚಿದಂಬರ ಜನ್ಮ ಆಖ್ಯಾನ, 11.30ಕ್ಕೆ ಧರ್ಮ ಸಭೆ, ಸನ್ಮಾನ ಕಾರ್ಯಕ್ರಮಗಳು ಜರುಗಲಿವೆ. ಮಧ್ಯಾಹ್ನ 1.30ಕ್ಕೆ ಶ್ರೀ ಚಿದಂಬರೇಶ್ವರ ರಥೋತ್ಸವವು ಅತ್ಯಂತ ವೈಭವದಿಂದ ನಡೆಯಲಿದೆ ಎಂದು ಭುಜಂಗಭಟ್ಟ ಜೋಷಿ ಹೇಳಿದರು.

ಸಭೆಯಲ್ಲಿ ಬ್ರಹ್ಮ ಸಮಾಜದ ಅನೇಕ ಗಣ್ಯರು, ಸುಮಂಗಲಿಯರು ಪಾಲ್ಗೊಂಡಿದ್ದರು. ನಿವೃತ್ತ ಉಪನ್ಯಾಸಕ ಎಸ್.ಎಚ್. ಕುಲಕರ್ಣಿ, ಅಜಿತ ಕುಲಕರ್ಣಿ, ಶಂಕ್ರಣ್ಣ ಕುಲಕರ್ಣಿ ನಿರ್ವಹಿಸಿದರು.

> ಡಿ.3ರ ಸಂಜೆ 7ಕ್ಕೆ ಝೀ ಕನ್ನಡದ ಸರಿಗಮಪ ಖ್ಯಾತಿಯ ಜ್ಞಾನೇಶ್ವರ, ಗಾಯಕಿ ದಿಯಾ ಹೆಗಡೆ ಅವರಿಂದ ಗಾಯನೋತ್ಸವ, ಖ್ಯಾತ ಸಂಗೀತಗಾರರಾದ ರೋಣದ ಕಿರಣ ಮಿಸ್ಕಿನ್, ಪೂಜಾ ಹಿರೇಮಠ, ಸದಾಶಿವ ಹೊನವಾಡ, ಕಾವ್ಯಾ ಮತ್ತು ಅಂಜಲಿ ಅವರಿಂದ ವೈವಿಧ್ಯಮಯ ಸಂಗೀತ ಕಾರ್ಯಕ್ರಮ ಜರುಗಲಿದೆ. ಈ ಸಂಗೀತಕ್ಕೆ ಕಲಾವಿದ ಗೋಕಾಕನ ಸಿದ್ದು ಇಟಗಿ ಚಿತ್ರಗಳನ್ನು ರಚಿಸಲಿದ್ದಾರೆ. ಡಿ 4ರಂದು ಅವಭೃತ ಸ್ನಾನ ಮತ್ತು ಶ್ರೀ ಚಿದಂಬರೇಶ್ವರ ಮಹಾಸ್ವಾಮಿಗೆ ಬುತ್ತಿ ಪೂಜೆಯನ್ನು ನೆರವೇರಿಸುವ ಮೂಲಕ ಉತ್ಸವಕ್ಕೆ ಮಂಗಲ ಹಾಡಲಾಗುತ್ತದೆ ಎಂದು ಜೋಷಿ ತಿಳಿಸಿದರು.

### ಕೆವಿಎಸ್‌ಎಸ್ ಮಹಾವಿದ್ಯಾಲಯದಲ್ಲಿ ವಿವಿಧ ಸೇವಾ ಯೋಜನೆಗಳ ಚಟುವಟಿಕೆ ಉದ್ಘಾಟನೆ

# ಸದೃಢ ಆರೋಗ್ಯದಿಂದ ಯಶಸ್ಸು ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕನಕದಾಸ ಶಿಕ್ಷಣ ಸಮಿತಿಯ ಕೆವಿಎಸ್ ಕಲಾ ವಾಣಿಜ್ಯ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಶನಿವಾರ ಜರುಗಿದ ಸಾಂಸ್ಕೃತಿಕ, ಕ್ರೀಡೆ ಸ್ಕೌಟ್ಸ್ & ಗೈಡ್ಸ್, ಯುವ ರೆಡ್ ಕ್ರಾಸ್ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ 'ಎ'ಮತ್ತು 'ಬಿ' ಘಟಕ, ಐಕ್ಯೂಎಸಿ, ಚಟುವಟಿಕೆಗಳ ಉದ್ಘಾಟನೆ ನೆರವೇರಿತು.

ಅತಿಥಿಗಳಾಗಿ ಆಗಮಿಸಿದ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಪ್ರಕಾಶ ಹೊಸಮನಿ ಮಾತನಾಡಿ, ಸಧೃಡವಾದ ಆರೋಗ್ಯವನ್ನು ಕಾಪಾಡಿಕೊಂಡು ಧೃಡವಾದ ಸಂಕಲ್ಪದೊಂದಿಗೆ ಸರಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಯಶಸ್ಸು ಸಾಧ್ಯವೆಂದರು.




ಕಾರ್ಯಕ್ರಮ ಉದ್ಘಾಟಿಸಿದ ರವೀಂದ್ರನಾಥ ದಂಡಿನ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯಪ್ರಜ್ಞೆ, ಪ್ರಾಮಾಣಿಕತೆಯೊಂದಿಗೆ ಸತತವಾಗಿ ಅಧ್ಯಯನಶೀಲರಾದಲ್ಲಿ ಉನ್ನತ ಸ್ಥಾನ ಅಲಂಕರಿಸಲು ಸಾಧ್ಯ ಎಂದರು.

ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಡಾ.ಸಿದ್ಧಣ್ಣ ಎಫ್. ಜಕಬಾಳ ಮಾತನಾಡಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಡಿ.ಬಿ. ಗವಾನಿ ಸರ್ವರನ್ನು ಸ್ವಾಗತಿಸಿ ಮುಖ್ಯ ಅತಿಥಿಗಳನ್ನು ಪರಿಚಯಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಉಪಪ್ರಾಚಾರ್ಯ ಡಾ. ಜಿ.ಸಿ. ಜಂಪ್ಪಣ್ಣವರ, ಡಾ. ಷಣ್ಮುಕಪ್ಪ ಕಾರಬಾರಿ, ಪ್ರೊ. ಬಿ.ಐ. ಬಿರಾದರ, ಪ್ರೊ. ಎಸ್.ಆರ್. ಜಟ್ಟಣ್ಣವರ, ಡಾ. ಅರವಿಂದ ಪೂಜಾರ, ಪ್ರೊ. ಎಸ್.ಬಿ. ಅಳಗುಂಡಗಿ, ಪ್ರೊ. ಕೆ.ಐ. ವಜ್ಜಲದ, ಪ್ರೊ. ಐ.ಕೆ. ಪಟ್ಟಣಶೆಟ್ಟಿ, ಪ್ರೊ. ವಾಯ್.ಬಿ. ರೇವಡಕುಂದಿ, ಪ್ರೊ. ಜೆ.ಎಸ್. ಅರಹುಣಸಿ, ಪ್ರೊ. ಎಸ್.ಬಿ. ಹಿರೇಮಠ, ಪ್ರೊ. ಎಸ್. ಎಸ್. ರಾಯ್ಕರ, ಪ್ರೊ. ಎಸ್. ಕೆ. ವಂಡಕರ, ಪ್ರೊ. ವಿ.ಎಚ್. ಕೊಳ್ಳಿ, ಡಾ. ಕೆ.ಎನ್. ಕಾರಬಾರಿ, ಪ್ರೊ. ಎಸ್.ಬಿ. ಪಲ್ಲೇದ, ಪ್ರೊ. ಶಿವಾನಂದ ಕೊರವರ ಉಪಸ್ಥಿತರಿದ್ದರು.

ಕುಮಾರಸ್ವಾಮಿ ಹಾಗೂ ಸಂಗಡಿಗರು ಪ್ರಾರ್ಥನೆಗೈದರು. ಗೌರಿ ಮೌನಿ, ಪ್ರಶಾಂತ ಮಾಜಿಸನದಿ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಎಸ್.ಬಿ.ಪಲ್ಲೇದ ವಂದಿಸಿದರು.

> ಅಧ್ಯಕ್ಷತೆ ವಹಿಸಿದ್ದ ಕನಕದಾಸ ಶಿಕ್ಷಣ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಬಿ.ಎಫ್. ದಂಡಿನ ಮಾತನಾಡಿ, ವಿದ್ಯಾರ್ಥಿಯ ಬದುಕಿನಲ್ಲಿ ಕಷ್ಟಗಳು ಬರುವುದು ಸಹಜ. ಕಷ್ಟಗಳಿಗೆ ಹೆದರದೇ ಬದುಕು ಕಟ್ಟಿಕೊಳ್ಳುವ ಗುರಿಯತ್ತ ಸಾಗಿದಾಗ ಗುರಿಮುಟ್ಟಲು ಸಾಧ್ಯವೆಂದರು.

## ಮಹಿಳೆಯ ಮೇಲಿನ ಗೌರವ ಕುಗ್ಗದಿರಲಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಮತೆ, ಕರುಣೆ, ವಾತ್ಸಲ್ಯ, ಸಹನೆಗೆ ಮತ್ತೊಂದು ಹೆಸರೇ ಮಹಿಳೆ. ಮನುಕುಲದ ಅಸ್ತಿತ್ವದ ಸಂಕೇತವಾದ ಮಹಿಳೆಯರನ್ನು ಗೌರವ, ಪೂಜ್ಯನೀಯ ಭಾವನೆಯಿಂದ ಕಾಣುವ ನಮ್ಮ ನೆಲದ ಸಂಸ್ಕೃತಿ ಮರೆಯಾಗಬಾರದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಹೇಳಿದರು.

ಅವರು ತಾಲೂಕು ಕಾನೂನು ಸೇವೆಗಳ ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಆಶ್ರಯದಲ್ಲಿ ಪಟ್ಟಣದ ಆಕ್ಸ್‌ಫರ್ಡ್ ಶಾಲೆಯಲ್ಲಿ ಶನಿವಾರ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ ಅಂಗವಾಗಿ ಕರ್ತವ್ಯನಿರತ ಮಹಿಳೆಯರ ಮೇಲೆ ಜರುಗುವ ಲೈಂಗಿಕ ಕಿರುಕುಳ ತಡೆ ಕುರಿತು ಕಾನೂನು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಕೀಲ ಪ್ರಕಾಶ ವಾಲಿ ಮಾತನಾಡಿ, ಮಹಿಳೆಯರ ಮೇಲಿನ ದೌರ್ಜನ್ಯದಿಂದಾಗಿ ಸಮಾನತೆ, ಅಭಿವೃದ್ಧಿ, ಶಾಂತಿಯನ್ನು ಸಾಧಿಸುವಲ್ಲಿ ನಾವು ತೀವ್ರ ಹಿನ್ನಡೆ ಅನುಭವಿಸುತ್ತಿದ್ದೇವೆ. ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮಾನವ ಹಕ್ಕುಗಳಿಗೆ ಅಡ್ಡಿಯಾಗುತ್ತಿದೆ ಎಂದರು.

ಶಾಲೆಯ ಆಡಳಿತ ಮಂಡಳಿಯ ಸದಸ್ಯ ಮಂಜುನಾಥ ಬೇವಿನಮರದ ಅಧ್ಯಕ್ಷತೆ ವಹಿಸಿದ್ದರು. ಬಿಆರ್‌ಪಿ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಬಿ. ಹೊಸಮನಿ, ನಂದಾ ಪಶುಪತಿಹಾಳ, ಶಿಕ್ಷಕರಾದ ಸಂತೋಷಕುಮಾರ ಕಲ್ಲಳ್ಳಿ, ಶರಣಬಸವರಾಜ ಹೂವಿನ, ಚೇತನಾ ಹಿರೇಮಠ, ತೇಜಸ್ವಿನಿ, ರೇಣುಕಾ ಕೆ.ಎಂ, ಕಾವ್ಯ ಕರಾಡಿ, ಶಿಲ್ಪಾ ವಠಾರದ ಸೇರಿ ಹಲವರಿದ್ದರು. ಸಿಆರ್‌ಪಿ ಉಮೇಶ ನೇಕಾರ, ಸತೀಶ ಬೋಮಲೆ ಅನುಷಾ ಕೆ.ಎಂ, ರೇಷ್ಮಾ ಬಾವಿಕಟ್ಟಿ ನಿರೂಪಿಸಿದರು.

## ಅತಿಥಿ ಉಪನ್ಯಾಸಕರ ಸತ್ಯಾಗ್ರಹ 3ನೇ ದಿನಕ್ಕೆ




■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಧಿಕಾರಿಗಳ ಕಚೇರಿಯೆದುರು ನಡೆಯುತ್ತಿರುವ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಸತ್ಯಾಗ್ರಹ 3ನೇ ದಿನವಾದ ಶನಿವಾರವೂ ಮುಂದುವರೆಯಿತು.

ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ತಮ್ಮ ಖಾಯಮಾತಿಗಾಗಿ ಆಗ್ರಹಿಸಿ ತರಗತಿ ಬಹಿಷ್ಕರಿಸಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಬೇಡಿಕೆ ಈಡೇರುವವರೆಗೂ ಮುಂದುವರೆಯುತ್ತದೆ ಎಂದು ಹಿರಿಯ ಉಪನ್ಯಾಸಕ ಪ್ರೊ.ನಾಗರಾಜ ಹೊನ್ನೂರ ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಡಾ. ಹನುಮಂತಗೌಡ ಆರ್.ಕಲ್ಮನಿ, ಡಾ. ಎಂ.ಡಿ. ನಾಯ್ಕು, ಎಂ.ಎಸ್. ಬನ್ನಿಕೊಪ್ಪ, ಎಸ್.ಶಶಿಮಠ, ಆರ್.ಎಫ್. ಶೆಟ್ಟೆಣ್ಣವರ, ಡಾ. ಎಸ್.ಬಡಿಗೇರ, ಅಶೋಕ ಸಾವಂತ್, ಸಿ.ವಿ. ಹಿರೇಮಠ, ಡಾ. ಸುಜಾತಾ ಬರದೂರ, ಶ್ರೀದೇವಿ ದಾಸರ, ಮಂಜುಳಾ ದೊಡ್ಡಮನಿ, ರಾಜೇಶ್ವರಿ ಬಾರಕೇರ, ಭೋಜರಾಜ ಹಳ್ಳಿ, ಸುಭಾಸ್ ಜಾಲಿಹಾಳ, ಎಂ.ಎಸ್. ಗೌಡರ, ಎಂ.ಎ. ಸೊಪ್ಪಿಮಠ, ಎಸ್. ಎಸ್. ಸರವಿ, ವಾಯ್.ಜಿ. ಹಂಚಿನಾಳ ಸೇರಿದಂತೆ ಮುಂಡರಗಿ ಮತ್ತು ಗದಗ ಮಹಿಳಾ ಕಾಲೇಜಿನ ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.

## ಬೇಡಿಕೆ ಈಡೇರಿಸುವಂತೆ ಹಮಾಲಿ ಕಾರ್ಮಿಕರ ಮನವಿ




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ಎಪಿಎಂಸಿ ಹಮಾಲಿ ಕಾರ್ಮಿಕರು ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್‌ನಿಂದ ಸರ್ಕಾರಕ್ಕೆ ಮನವಿ ಪತ್ರವನ್ನು ಶಾಸಕ ಡಾ.ಚಂದ್ರು ಲಮಾಣಿ ಅವರ ಮೂಲಕ ಸಲ್ಲಿಸಿದರು. ಮನವಿ ಪತ್ರದಲ್ಲಿ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಹಮಾಲಿ ಕಾರ್ಮಿಕರಿಗಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು, ಹಮಾಲಿ ಕಾರ್ಮಿಕರ ಫೆಡರೇಶನ್‌ಗೆ ಪ್ರಾತಿನಿಧ್ಯ ನೀಡಿ, ಅಸಂಘಟಿತ ಕಾರ್ಮಿಕರ ಭವಿಷ್ಯ ನಿಧಿ ಯೋಜನೆ ಕಾನೂನು ಜಾರಿ ಮಾಡಬೇಕು, ಪ್ರಧಾನಮಂತ್ರಿ ಜೀವನ ಭೀಮಾ, ಸುರಕ್ಷಾ ಹಾಗೂ ಶ್ರಮ ಯೋಗಿ ಮಾನ್ ಧನ್ ಯೋಜನೆ ಉಚಿತವಾಗಿ ಜಾರಿ ಮಾಡಬೇಕು ಇತ್ಯಾದಿ ಬೇಡಿಕೆಗಳನ್ನು ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ನಿಂಗಪ್ಪ ಶರಸೂರಿ ಮಾತನಾಡಿ, ನ.27–28ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ರಾಜ್ಯ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಕಾರ್ಮಿಕರು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಿದ್ದೇವೆ ಎಂದರು. ಮನವಿ ಸ್ವೀಕರಿಸಿದ ಶಾಸಕರು, ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ತಮ್ಮ ಪರವಾದ ಧ್ವನಿಯಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದರು.

ಈ ವೇಳೆ ಕಾರ್ಮಿಕ ಮುಖಂಡರಾದ ಮಲ್ಲಪ್ಪ ತಿರಕಪ್ಪ ಗದ್ದಿ, ಬಿ.ಎಸ್. ಕುಸಗಲ್, ಎಂ.ಎಸ್. ಪೂಜಾರ, ಎಸ್.ಎಸ್. ದುರಗಣ್ಣವರ, ನೀಲಪ್ಪ ಹುರಕನವರ, ನೀಲಪ್ಪಗೌ ಮಾಂತೇಶ ಗಡ್ಡಿ, ರಾಮಣ್ಣ ಬಳಗಾನೂರ, ನಿಂಗಪ್ಪ ಕರಿಗಾರ, ಕಾರ್ಯದರ್ಶಿ ಎಸ್.ಕೆ. ಕಾಳಪ್ಪನವರ, ಮಯೂರ ಪಾಟೀಲ, ಈರಣ್ಣ ಅಕ್ಕೂರ, ಶಿವಯೋಗಿ ವಡಕಣ್ಣವರ ಮತ್ತಿತರರಿದ್ದರು.

### ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ನಿವಾಸದಲ್ಲಿ ಕೆ.ಎಸ್. ಈಶ್ವರಪ್ಪ ಹೇಳಿಕೆ

# ರಾಜ್ಯ ಕಾಂಗ್ರೆಸ್ ಕ್ಯಾಬಿನೆಟ್ ಕಳ್ಳರ ಗ್ಯಾಂಗ್



> ಜಾತಿಗಣತಿಯಿಂದ ಜಾತಿ–ಜಾತಿಗಳ ನಡುವೆ ಬೆಂಕಿ ಹಚ್ಚುವ ಕೆಲಸವನ್ನು ಸಿದ್ಧರಾಮಯ್ಯ ಮಾಡುತ್ತಿದ್ದಾರೆ. ಹಿಂದುಳಿದ–ದಲಿತ ಚಾಂಪಿಯನ್ ಎನ್ನಿಸಿಕೊಳ್ಳುವ ಭರದಲ್ಲಿ ಜಾತಿ ಬೀಜ ಬಿತ್ತುತ್ತಿದ್ದಾರೆ. ಈ ವಿವಾದಿತ ವರದಿಯ ಸತ್ಯಾಸತ್ಯತೆ ತನಿಖೆಯಾಗಬೇಕು ಎಂದು ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಡಿಸಿಎಂ ಡಿ.ಕೆ. ಶಿವಕುಮಾರ ವಿರುದ್ಧ ಸಿಬಿಐಗೆ ನೀಡಿದ್ದ ಅನುಮತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ವಾಪಸ್ ಪಡೆಯುತ್ತಿರುವುದು, ದೇಶದ ಇತಿಹಾಸದಲ್ಲಿಯೇ ಮೊದಲು. ಸಿಬಿಐನಿಂದ ಶೇ.80 ತನಿಖೆ ಮುಗಿದಿರುವ ಕೇಸನ್ನು ಅಕ್ರಮವಾಗಿ ಹಿಂಪಡೆಯಲು ಕೈಗೊಂಡಿರುವ ನಿರ್ಣಯ ಕಾಂಗ್ರೆಸ್ ಪಕ್ಷದ ಅವನತಿಗೆ ಮೊದಲ ಹೆಜ್ಜೆಯಾಗಿದೆ ಎಂದು ಕೆ.ಎಸ್. ಈಶ್ವರಪ್ಪ ಭವಿಷ್ಯ ನುಡಿದಿದ್ದಾರೆ.

ಅವರು ಶುಕ್ರವಾರ ಲಕ್ಷ್ಮೇಶ್ವರದ ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ಅವರ ನಿವಾಸಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ಡಿಕೆಶಿ ಮೇಲಿರುವ ಕೇಸನ್ನು ತಡೆಯಲು ನಡೆಸಿದ ಪ್ರಯತ್ನಗಳು ವಿಫಲಾಗಿವೆ. ಸರ್ಕಾರಗಳಿಗೆ ಕೇಸನ್ನು ಸಿಬಿಐನವರಿಗೆ ಕೊಡಲು ಅವಕಾಶವಿದೆ–ಹಿಂಪಡೆಯುವ ಅಧಿಕಾರವಿಲ್ಲ. ಸಿಬಿಐನವರೇ ಈ ಕೇಸನ್ನು ಹೈಕೋರ್ಟ್‌ಗೆ ಕೊಡುವ ನಿರ್ಧಾರ ಕೈಗೊಂಡಿದ್ದಾರೆ. ಬಿಜೆಪಿಯವರು ಕಾಂಗ್ರೆಸ್ ನಡೆಯ ವಿರುದ್ಧ ಹೋರಾಟ ಮಾಡುತ್ತೇವೆ ಎಂದರು.

ರಾಜ್ಯಾಧ್ಯಕ್ಷ ವಿಜಯೇಂದ್ರ ಆಯ್ಕೆಗೆ ಸಂಬಂಧಿಸಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಬಿಜೆಪಿ ಒಂದು ದೊಡ್ಡ ಕುಟುಂಬ. ಸಹೋದರರಲ್ಲಿ ಪರಸ್ಪರ ಮನಸ್ತಾಪ ಸಹಜ. ಪಕ್ಷಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಒಗ್ಗಟ್ಟಿನಿಂದ ಮುಂಬರುವ ಎಂಪಿ ಚುನಾವಣೆಯಲ್ಲಿ ದಿಗ್ವಿಜಯ ಸಾಧಿಸಲಿದ್ದೇವೆ. ಬಿಜೆಪಿ ಹಿಂದುಳಿದ ವರ್ಗದವರ ಪರವಾಗಿದೆ.

ನರೇಂದ್ರ ಮೋದಿ ಹಿಂದುಳಿದ ವರ್ಗದವರಿಗೆ ಶ್ರೇಷ್ಠ ಸ್ಥಾನಮಾನ ನೀಡಿ ಗೌರವಿಸಿದ್ದಾರೆ. ಹಿಂದುಳಿದ ಸಮಾಜದ ಮಠ–ಮಾನ್ಯಗಳನ್ನು ಕಾಂಗ್ರೆಸ್ ಕಣ್ಣೆತ್ತಿಯೂ ನೋಡುವುದಿಲ್ಲ. ಆದರೆ ಬಿಜೆಪಿ ಹಿಂದುಳಿದ–ದಲಿತರ ಮಠಗಳು, ಜನಕಲ್ಯಾಣದ ಅಭಿವೃದ್ಧಿಗೆ ಕೋಟ್ಯಾಂತರ ರೂ ಅನುದಾನ ಕಲ್ಪಿಸಿದೆ ಎಂದರು.

ಬರಗಾಲದ ವಸ್ತುಸ್ಥಿತಿಯನ್ನು ಕೇಂದ್ರಕ್ಕೆ ವಿವರಿಸಿ ಸೌಜನ್ಯದಿಂದ ಪರಿಹಾರ ಕೇಳದೇ ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ.

ರಾಜ್ಯ ಸರ್ಕಾರದ ಬರಪರಿಹಾರ ಘೋಷಣೆಗೆ ಮಾತ್ರ ಸೀಮಿತವಾಗಿದೆ. ಬಿಜೆಪಿಯೂ ಬರ ಅಧ್ಯಯನ ನಡೆಸಿ ವರದಿ ಸಲ್ಲಿಸಿದ್ದು, ಕೇಂದ್ರದ ಪಾಲಿನ ಪರಿಹಾರ ಬರಲಿದೆ ಎಂದ ಅವರು, ಹಾವೇರಿ ಮತಕ್ಷೇತ್ರಕ್ಕೆ ತಮ್ಮ ಪುತ್ರ ಕಾಂತೇಶ ಅವರು ಸ್ಪರ್ಧಿಯೇ ಎಂಬ ಪ್ರಶ್ನೆಗೆ ಪಕ್ಷದ ಹೈಕಮಾಂಡ್ ಯಾರಿಗೆ ಅವಕಾಶ ಕೊಡುತ್ತದೆಯೋ ಅವರನ್ನು ಗೆಲ್ಲಿಸುವ ಕೆಲಸ ಮಾಡುತ್ತೇವೆ ಎಂದರು.

ಈ ವೇಳೆ ಕುಬೇರಪ್ಪ ಮಹಾಂತೆಟ್ಟರ, ಕಾಂತೇಶ ಈಶ್ವರಪ್ಪ, ನೀಲಪ್ಪ ಕರ್ಜೆಕಣ್ಣವರ, ಪರಶುರಾಮ ಇಮ್ಮಡಿ, ಮಂಜನಗೌಡ ಕೆಂಚನಗೌಡ, ದೇವಣ್ಣ ಬಳಿಗಾರ, ಪ್ರವೀಣ ಬಾಳಿಕಾಯಿ, ನಿಂಗಪ್ಪ ಪ್ಯಾಟಿ, ವಿಜಯ ಹತ್ತಿಕಾಳ, ರುದ್ರಪ್ಪ ಉಮಚಗಿ, ದುಂಡೇಶ ಕೊಟಗಿ, ಶಿವಯೋಗಿ ಅಂಕಲಕೋಟಿ, ಸಿದ್ದನಗೌಡ ಬಳ್ಳೊಳ್ಳಿ, ಹಾಲಪ್ಪ ಸೂರಣಗಿ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka